ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಬುಧವಾರ, ಜುಲೈ 12, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 59 RNI : 27369/75

50 1974 2023

janathavani@mac.com
www.janathavani.com
08192 254736 91642 99999



**ಚಂದ್ರಯಾನ-3 ಮಿಷನ್** ನವದೆಹಲಿ: ಕಳೆದ ಮೂರು ದಶಕಗಳಿಂದ ಭಾರತೀಯ ಬಾಹ್ಯಾಕಾಶ ಕಾರ್ಯಕ್ರಮದೊಂದಿಗೆ ಸಂಬಂಧ ಹೊಂದಿರುವ ಗೋದ್ರೇಜ್ ಏರೋಸ್ಪೇಸ್ ಮುಂಬರುವ ಚಂದ್ರಯಾನ-3 ಮಿಷನ್‌ಗೆ ನಿರ್ಣಾಯಕ ಸಾಧನಗಳನ್ನು ಪೂರೈಸಲಿದ್ದು, ಘಟಕಗಳ ತಯಾರಿಕೆಯಲ್ಲಿ ಕಾರ್ಮಿಕರು ತೊಡಗಿಸಿಕೊಂಡಿರುವ ಚಿತ್ರ.

# ವೈಜ್ಞಾನಿಕ ತನಿಖೆಯಲ್ಲಿ ಕಾಣದ ಪ್ರಗತಿ

## ಮೂಲಭೂತ ತನಿಖಾ ವಿಷಯಗಳಲ್ಲೇ ಲೋಪ: ಡಾ. ದಿನೇಶ್ ರಾವ್

ದಾವಣಗೆರೆ, ಜು. 11 - ಭಾರತ ಮಾಹಿತಿ ತಂತ್ರಜ್ಞಾನ ಹಾಗೂ ವೈದ್ಯಕೀಯ ವಲಯದಲ್ಲಿ ಉನ್ನತ ಸಾಧನೆ ಮಾಡಿದ್ದರೂ ಸಹ, ಅಪರಾಧಗಳ ವೈಜ್ಞಾನಿಕ ತನಿಖೆಯಲ್ಲಿ ಹಿಂದಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಎಐಐಎಂಎಸ್ ನಿರ್ದೇಶಕ ಡಾ. ದಿನೇಶ್ ರಾವ್ ವಿಷಾದಿಸಿದ್ದಾರೆ.




ನಗರದ ಕಾನೂನು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 'ನ್ಯಾಯಾಲಯ ವಿಚಾರಣೆಯಲ್ಲಿ ವಿಧಿ ವಿಜ್ಞಾನ ಸಾಕ್ಷಿ' ಎಂಬ ವಿಷಯ ಕುರಿತು ಒಂದು ದಿನದ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಅಪರಾಧದ ಸಂದರ್ಭದಲ್ಲಿ ವಿಧಿ, ವಿಜ್ಞಾನ ಪುರಾವೆಗಳ ಸಂಗ್ರಹಣೆಯಲ್ಲೇ ಸಾಕಷ್ಟು ಲೋಪಗಳಾಗುತ್ತಿವೆ. ಪೊಲೀಸ್ ತನಿಖೆಯಲ್ಲಿ ಕೊರತೆಗಳಿರುತ್ತವೆ. ಇದರಿಂದಾಗಿ ನ್ಯಾಯಾಲಯಗಳಲ್ಲಿ ಸಮರ್ಪಕ ತೀರ್ಪುಗಳು ಬರುತ್ತಿಲ್ಲ. ಮೂಲಭೂತ ತನಿಖೆಯಲ್ಲೇ ವಿಫಲವಾದ ನಂತರ, ನ್ಯಾಯಾಂಗವನ್ನು ದೂಷಿಸಲಾಗದು ಎಂದವರು ಹೇಳಿದರು.

ವಿಧಿ ವಿಜ್ಞಾನ ಪುರಾವೆಗಳು ಅಪರಾಧ ಸಾಬೀತುಪಡಿಸುವಲ್ಲಿ ಅತಿ ಹೆಚ್ಚು ನೆರವಾಗುತ್ತವೆ. ವಿಚಾರಣೆ ವಿಳಂಬವಾದರೂ ವಿಧಿ ವಿಜ್ಞಾನ ಪುರಾವೆಗಳ ಮೇಲೆ ಪ್ರಭಾವ ಆಗುವುದಿಲ್ಲ. ಆದರೆ, ಸಾಕ್ಷಿಗಳ ವಿಷಯದಲ್ಲಿ ಈ ರೀತಿ ಹೇಳಲಾಗದು. ಎಷ್ಟೋ ಬಾರಿ ಸಾಕ್ಷಿಗಳು ಅಪರಾಧದ ಪ್ರಮುಖ ವಿಷಯಗಳನ್ನೇ ಮರೆತು ಬಿಡುತ್ತಾರೆ ಎಂದವರು ಹೇಳಿದರು.

ಪ್ರಾಸಿಕ್ಯೂಷನ್ ಸಾಕ್ಷಿ ಸಂಗ್ರಹದಲ್ಲಿ ಮಾಡುವ ಲೋಪವನ್ನು ಆರೋಪಿ ಪರ ವಕೀಲರು ಬಳಸಿಕೊಳ್ಳುವಲ್ಲಿ ಮುಂದಿರುತ್ತಾರೆ. ಆರೋಪಿ ಪರ ವಕೀಲರಿಗೆ ಲೋಪಗಳು ಸಿಗದ ರೀತಿಯಲ್ಲಿ ಪ್ರಾಸಿಕ್ಯೂಷನ್ ಹಾಗೂ ಪೊಲೀಸರು ಕಾರ್ಯನಿರ್ವಹಿಸಬೇಕಾಗುತ್ತದೆ. ಹೀಗಾಗಿ, ಒಂದು ರೀತಿಯಲ್ಲಿ ಆರೋಪಿ ಪರ ವಕೀಲರಿಂದಲೇ ಪ್ರಾಸಿಕ್ಯೂಷನ್ ಹೊಸ ವಿಷಯಗಳನ್ನು ಕಲಿಯಬೇಕಿದೆ ಎಂದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಬಿ.ಡಿ. ಕುಂಬಾರ್, ಕಾನೂನು ಹಾಗೂ ವಿಧಿ ವಿಜ್ಞಾನ ವಿಷಯಗಳು ಪರಸ್ಪರ ಸಂಬಂಧಿಸಿವೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಬಹುಶಿಸ್ತೀಯ ಹಾಗೂ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಒತ್ತು ಕೊಡಬೇಕು ಎಂದು ಹೇಳಿದರು.

ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆಗಿರುವ ನ್ಯಾಯಮೂರ್ತಿ ಮಹಾವೀರ್ ಕರೆಣ್ಣನವರ್ ಮಾತನಾಡಿ, ಕ್ರಿಮಿನಲ್ ಪ್ರಕರಣಗಳಷ್ಟೇ ಅಲ್ಲದೇ ಸಿವಿಲ್ ಪ್ರಕರಣಗಳಲ್ಲೂ ವಿಧಿ (4ನೇ ಪುಟಕ್ಕೆ)

### ಐಎಎಸ್ ಅಧಿಕಾರಿ ಸಾವಿನ ತನಿಖೆಯಲ್ಲೇ ಲೋಪ

**ಐಎಎಸ್ ಅಧಿಕಾರಿ ಡಿ.ಕೆ. ರವಿ ಸಾವಿನ ಪ್ರಕರಣದಲ್ಲಿ ಸಾಕ್ಷಿಗಳನ್ನು ಸಂಗ್ರಹಿಸುವಲ್ಲಿಯೇ ಲೋಪವಾಗಿದ್ದು ಕಂಡು ಬಂದಿತ್ತು. ಪೊಲೀಸರು ಬರಿಗೈಯ್ಯಲ್ಲೇ ಘಟನಾ ಸ್ಥಳದಲ್ಲಿದ್ದ ವಸ್ತುಗಳನ್ನು ಮುಟ್ಟಿದ್ದರು. ಮೃತದೇಹವನ್ನು ಬೆಡ್‌ಶೀಟ್‌ನಲ್ಲಿ ತೆಗೆದುಕೊಂಡು ಹೋಗಲಾಗಿತ್ತು ಎಂದು ಡಾ. ದಿನೇಶ್ ರಾವ್ ಹೇಳಿದರು. ಉನ್ನತ ಅಧಿಕಾರಿ ಸಾವಿನ ಪ್ರಕರಣದಲ್ಲೇ ಈ ರೀತಿಯ ತನಿಖೆ ಆದರೆ, ಉಳಿದ ಪ್ರಕರಣಗಳ ಗತಿ ಏನು? ಅಪರಾಧ ಸ್ಥಳದಲ್ಲಿನ ಸಾಕ್ಷಿ ಸಂಗ್ರಹಿಸುವಾಗ ವೈಜ್ಞಾನಿಕ ಪ್ರಕ್ರಿಯೆ ಅನುಸರಿಸಬೇಕು. ತಪ್ಪಾದ ತನಿಖೆಯಿಂದ ಸಾಮಾನ್ಯ ಸಾವಿನ ಪ್ರಕರಣಗಳೂ ಬಗೆಹರಿಯದೇ ನಿಗೂಢವಾಗುತ್ತವೆ ಎಂದವರು ಎಚ್ಚರಿಸಿದರು.**

# ಕೃಷಿ ಕಾಯ್ದೆ ಶೀಘ್ರ ವಾಪಸ್ಸಾತಿಗೆ ಕೋಡಿಹಳ್ಳಿ ಚಂದ್ರಶೇಖರ್ ಆಗ್ರಹ



ದಾವಣಗೆರೆ, ಜು. 11- ಕೃಷಿ ಭೂಮಿ ಮಾರಾಟ ಹಾಗೂ ಕೃಷಿ ಭೂಮಿ ಪರಿವರ್ತನೆಯಿಂದ ಸರ್ಕಾರಕ್ಕೆ ಕೋಟ್ಯಾಂತರ ರೂ. ಆದಾಯ ಬರುತ್ತಿದೆ. ದೊಡ್ಡ ಪ್ರಮಾಣದ ಆದಾಯದ ಮೂಲ ಇದಾಗಿರುವುದರಿಂದ ಸರ್ಕಾರ, ಕಾಯಿದೆ ಹಿಂಪಡೆಯುವ ವಿಚಾರವಾಗಿ ಅನುಮಾನಾಸ್ಪದವಾಗಿ ನಡೆದುಕೊಳ್ಳುತ್ತಿದೆ ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆರೋಪಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಬಳಿಕ ಅವರನ್ನು ಸ್ವತಃ ಭೇಟಿಯಾಗಿ ಭೂ ಸುಧಾರಣಾ ತಿದ್ದುಪಡಿ ಕಾಯಿದೆ ಹಿಂಪಡೆಯಲು ಮನವಿ ಪತ್ರ ನೀಡಲಾಯಿತು. ಆಗ ಅವರು, ಈ ಕುರಿತು ಪರಿಶೀಲಿಸುವುದಾಗಿ ಹೇಳಿದ್ದಾರೆ. ಸಿದ್ಧರಾಮಯ್ಯ ಅವರ ಈ ಪರಿಶೀಲಿಸುವ ಹೇಳಿಕೆ ರೈತರಲ್ಲಿ ಅನುಮಾನ ಮೂಡಿಸಿದೆ. ಮುಖ್ಯಮಂತ್ರಿಗಳು ಕೂಡಲೇ ಕಾಯಿದೆಯನ್ನು ವಾಪಸ್ ಪಡೆಯುವ ನಿರ್ಧಾರ ಪ್ರಕಟಿಸಬೇಕು ಎಂದು ಆಗ್ರಹಿಸಿದರು.

ರೈತರ ಒತ್ತಡಕ್ಕೆ ಮಣಿದು ದೆಹಲಿಯಲ್ಲಿ ಪ್ರಧಾನಿ ಮೋದಿಯವರು ಯಾವುದೇ ಷರತ್ತಿಲ್ಲದೇ ರೈತ ವಿರೋಧಿ ಕಾನೂನುಗಳನ್ನು ಹೇಗೆ ಹಿಂಪಡೆದರೋ ಅದೇ ರೀತಿ ರಾಜ್ಯದಲ್ಲಿಯೂ ಈ ಕಾಯಿದೆಯನ್ನು ರಾಜ್ಯ ಸರ್ಕಾರ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಸ್ವಾಮಿನಾಥನ್ ವರದಿಯನ್ನು ಮಾನದಂಡವನ್ನಾಗಿಸಿಕೊಂಡು ಕನಿಷ್ಟ ಬೆಂಬಲ (4ನೇ ಪುಟಕ್ಕೆ)

# ಎಫ್‌ಎಟಿಎಫ್‌ಗಾಗಿ ಜಿಎಸ್ಟಿ ಮಾಹಿತಿ ಹಂಚಿಕೆ

ನವದೆಹಲಿ, ಜು. 11 – ಅಕ್ರಮ ಹಣ ಕಾಯ್ದೆಗೆ ತಿದ್ದುಪಡಿ ತಂದಿರುವ ಬಗ್ಗೆ ಪ್ರತಿಪಕ್ಷಗಳ ಆಡಳಿತದ ರಾಜ್ಯಗಳು ವ್ಯಕ್ತಪಡಿಸುತ್ತಿರುವ ಕಳವಳಗಳನ್ನು ತಳ್ಳಿ ಹಾಕಿರುವ ಕೇಂದ್ರ ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರ, ಹಣಕಾಸು ಕ್ರಿಯಾ ಕಾರ್ಯಪಡೆಯ (ಎಫ್.ಎ.ಟಿ.ಎಫ್.) ಬದ್ಧತೆಯನ್ನು ಈಡೇರಿಸುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಎಫ್.ಎ.ಟಿ.ಎಫ್. ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ. ಅಕ್ರಮ ಹಣ ಹಾಗೂ ಉಗ್ರವಾದಿ ಹಣಕಾಸಿನ ವಿರುದ್ಧ ಹೋರಾಟ ನಡೆಸಲು ಈ ಸಂಸ್ಥೆಯು ಮಾನದಂಡಗಳನ್ನು ನಿಗದಿಪಡಿಸುತ್ತದೆ. ಭಾರತ 2010ರಿಂದ ಇದರ ಸದಸ್ಯವಾಗಿದೆ.

ಕೇಂದ್ರ ಸರ್ಕಾರ ತಂದಿರುವ ಬದಲಾವಣೆಗಳಿಂದ ತೆರಿಗೆ ಅಧಿಕಾರಿಗಳಿಗೆ ಹೆಚ್ಚಿನ (4ನೇ ಪುಟಕ್ಕೆ)

# ಜಿಎಸ್‌ಟಿ ಜಾಲದಲ್ಲಿ ಇಡಿ ಸೇರ್ಪಡೆಗೆ ವಿರೋಧ

ನವದೆಹಲಿ, ಜು. 11 – ಜಿ.ಎಸ್.ಟಿ. ಜಾಲದ ಜೊತೆ ಮಾಹಿತಿ ಹಂಚಿಕೊಳ್ಳಲು ಜಾರಿ ನಿರ್ದೇಶನಾಲಯ (ಇ.ಡಿ.)ಕ್ಕೆ ಅವಕಾಶ ನೀಡುವ ಕೇಂದ್ರ ಸರ್ಕಾರದ ಕ್ರಮಕ್ಕೆ ಪ್ರತಿಪಕ್ಷಗಳು ಆಕ್ಷೇಪಿಸಿವೆ.

ಅಕ್ರಮ ಹಣ ತಡೆ ಕಾಯ್ದೆಗೆ ತಿದ್ದುಪಡಿ ತರುವ ಆದೇಶ ಹೊರಡಿಸಿದ್ದ ಕೇಂದ್ರ ಸರ್ಕಾರ, ಜಿ.ಎಸ್.ಟಿ. ಜಾಲದ ಜೊತೆ ಇ.ಡಿ. ಮಾಹಿತಿ ಹಂಚಿಕೊಳ್ಳಬಹುದು ಎಂದು ಹೇಳಿತ್ತು.

ಮಂಗಳವಾರ ನಡೆದ ಜಿ.ಎಸ್.ಟಿ. ಮಂಡಳಿ ಸಭೆಯಲ್ಲಿ ಆಮ್ ಆದ್ಮಿ ಪಾರ್ಟಿ ಆಡಳಿತದ ಪಂಜಾಬ್‌ನ ಹಣಕಾಸು ಸಚಿವ ಹರ್‌ಪಾಲ್ ಸಿಂಗ್ ಚೀಮ ಅವರು ಸರ್ಕಾರದ ಕ್ರಮಕ್ಕೆ ಆಕ್ಷೇಪಿಸಿದ್ದಾರೆ. ದೆಹಲಿ, ಪಂಜಾಬ್, ಪಶ್ಚಿಮ ಬಂಗಾಳ, ತಮಿಳುನಾಡು, ಹಿಮಾಚಲ ಪ್ರದೇಶ, ಕರ್ನಾಟಕ, ಛತ್ತೀಸ್‌ಘಡ, ತೆಲಂಗಾಣ ಹಾಗೂ ರಾಜಸ್ಥಾನಗಳ ಹಣಕಾಸು ಸಚಿವರು ಸರ್ಕಾರದ ಕ್ರಮಕ್ಕೆ ಆಕ್ಷೇಪಿಸಿದ್ದಾರೆ. ಈ ಬಗ್ಗೆ ಜಿ.ಎಸ್.ಟಿ. ಮಂಡಳಿಯಲ್ಲಿ ಚರ್ಚೆ ನಡೆಯಬೇಕು (2ನೇ ಪುಟಕ್ಕೆ)

# ಲಾರಿ ಕ್ಯಾಬಿನ್‌ಗಳಲ್ಲಿ ಎ.ಸಿ. ಕಡ್ಡಾಯ

**ಕೇಂದ್ರದಿಂದ ಕರಡು ಅಧಿಸೂಚನೆ**

ನವದೆಹಲಿ, ಜು. 11 – ಲಾರಿಯ ಕ್ಯಾಬಿನ್‌ಗಳಲ್ಲಿ ಎ.ಸಿ. ಕಡ್ಡಾಯಗೊಳಿಸುವ ಕರಡು ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಇದರಿಂದ ಲಾರಿ ಚಾಲಕರ ಕಾರ್ಯನಿರ್ವಹಣೆ ಪರಿಸ್ಥಿತಿಯಲ್ಲಿ ಸುಧಾರಣೆಯಾಗಲಿದೆ.

2025ರ ಜನವರಿ 1ರಿಂದ ಉತ್ಪಾದನೆಯಾಗುವ ಎನ್2 ಹಾಗೂ ಎನ್3 ವರ್ಗದ ಲಾರಿಗಳ ಕ್ಯಾಬಿನ್‌ಗಳಲ್ಲಿ ಹವಾನಿಯಂತ್ರಕ ಅಳವಡಿಕೆ ಕಡ್ಡಾಯಗೊಳಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ.

ಐಎಸ್ 14618 : 2022 ಮಾನದಂಡದ ಅನ್ವಯ ಎ.ಸಿ.ಗಳು ಕಾರ್ಯನಿರ್ವಹಿಸಬೇಕು ಎಂದು ಜುಲೈ 10ರಂದು ಹೊರಡಿಸಲಾದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಂಬಂಧಿಸಿದವರು ಸಲಹೆಗಳನ್ನು ನೀಡಬಹುದು ಎಂದು ಕೇಂದ್ರ ಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ತಿಳಿಸಿದೆ.

ಲಾರಿಗಳ ಕ್ಯಾಬಿನ್‌ಗಳಲ್ಲಿ ಎ.ಸಿ.ಗಳ ಅಳವಡಿಕೆಯ ಕರಡು ಅಧಿಸೂಚನೆಗೆ ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಜುಲೈ 6ರಂದು ತಿಳಿಸಿದ್ದರು.

ಲಾರಿ ಚಾಲಕರಿಗೆ ಅನುಕೂಲಕರ ವಾತಾವರಣ ಕಲ್ಪಿಸುವಲ್ಲಿ ಇದು ಪ್ರಮುಖ ಹೆಜ್ಜೆಯಾಗಿದೆ. ಇದರಿಂದ ಚಾಲಕರ ದಕ್ಷತೆ ಹೆಚ್ಚಾಗಲಿದೆ ಹಾಗೂ ಅವರ ಬಳಲಿಕೆಯ ಸಮಸ್ಯೆ ನೀಗಲಿದೆ ಎಂದು ಗಡ್ಕರಿ ಹೇಳಿದ್ದರು.

ಲಾರಿ ಚಾಲಕರು ಹೆಚ್ಚಿನ ತಾಪಮಾನದಲ್ಲಿ ಕೆಲಸ ಮಾಡಬೇಕಾಗಿದೆ. ಸಾಕಷ್ಟು ದಿನಗಳಿಂದ ಎ.ಸಿ. ಕ್ಯಾಬಿನ್ ಪ್ರಸ್ತಾವನೆ ಮಾಡುತ್ತಲೇ ಬಂದಿದ್ದೇನೆ. ಆದರೆ, ಕೆಲವರು ವಾಹನದ ವೆಚ್ಚ ಹೆಚ್ಚಾಗುತ್ತದೆ ಎಂದು ಆಕ್ಷೇಪಿಸುತ್ತಾ ಬಂದಿದ್ದಾರೆ ಎಂದು ಸಚಿವರು ಹೇಳಿದ್ದರು.

## ಭಾರತದಲ್ಲಿ ಚಿಪ್ ಉತ್ಪಾದನೆಗೆ ಅರ್ಜಿ

ನವದೆಹಲಿ, ಜು. 11- ಭಾರತದಲ್ಲಿ ಕಂಪ್ಯೂಟರ್ ಚಿಪ್‌ಗಳ ಉತ್ಪಾದನೆಗಾಗಿ ಸರ್ಕಾರದಿಂದ ಉತ್ತೇಜನ ಪಡೆಯಲು ಪ್ರತ್ಯೇಕ ಅರ್ಜಿ ಸಲ್ಲಿಸುವುದಾಗಿ ಜಾಗತಿಕ ದೈತ್ಯ ಕಂಪನಿಯಾದ ಫಾಕ್ಸ್‌ಕಾನ್ ತಿಳಿಸಿದೆ. ಚಿಪ್ (4ನೇ ಪುಟಕ್ಕೆ)

### ಭದ್ರಾ ಜಲಾಶಯ

ಇಂದಿನ ಮಟ್ಟ : 140 ಅಡಿ 10 ಇಂಚು
ಒಳ ಹರಿವು : 823 ಕ್ಯೂಸೆಕ್ಸ್
ಹೊರ ಹರಿವು : 163 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 174.6 ಅಡಿ

## ಆನ್ಲೈನ್, ಕ್ಯಾಸಿನೋ, ಕುದುರೆ ರೇಸ್‌ಗೆ ಶೇ.28ರ ಜಿಎಸ್‌ಟಿ

ನವದೆಹಲಿ, ಜು. 11 – ಆನ್‌ಲೈನ್ ಗೇಮಿಂಗ್, ಕ್ಯಾಸಿನೋ ಹಾಗೂ ಕುದುರೆ ರೇಸ್‌ಗಳ ಪೂರ್ಣ ಮೌಲ್ಯದ ಮೇಲೆ ಶೇ.28ರ ತೆರಿಗೆ ವಿಧಿಸಲು ಜಿ.ಎಸ್.ಟಿ. ಮಂಡಳಿ ನಿರ್ಧರಿಸಿದೆ.

ಕ್ಯಾನ್ಸರ್ ಔಷಧವಾದ ಡಿನುಟುಕ್ಸಿಮ್ಯಾಬ್ ಹಾಗೂ ಅಪರೂಪದ ರೋಗಗಳ ಚಿಕಿತ್ಸೆಗೆ ಬಳಸುವ ವಿಶೇಷ ಆಹಾರಗಳ ಆಮದಿಗೆ ತೆರಿಗೆ ವಿನಾಯಿತಿ ನೀಡಲೂ ಸಹ ಮಂಡಳಿ ನಿರ್ಧಾರ ತೆಗೆದುಕೊಂಡಿದೆ.

ಮಂಡಳಿ ಸಭೆಯ ನಂತರ ಮಾತನಾಡಿರುವ ಪಶ್ಚಿಮ ಬಂಗಾಳದ ಹಣಕಾಸು ಸಚಿವೆ ಚಂದ್ರಿಮ ಭಟ್ಟಾಚಾರ್ಯ, ಆನ್‌ಲೈನ್ ಗೇಮಿಂಗ್, ಕ್ಯಾಸಿನೋ ಹಾಗೂ ಕುದುರೆ ರೇಸ್‌ಗಳಿಗೆ ಸಂಬಂಧಿಸಿದಂತೆ (2ನೇ ಪುಟಕ್ಕೆ)

## ತಿಂಗಳ ಅಂತ್ಯದೊಳಗೆ ಅರ್ಹ ರೈತರಿಗೆ ಯಶಸ್ವಿನಿ ಕಾರ್ಡ್

ಬೆಂಗಳೂರು, ಜು.11- ರಾಜ್ಯದ ಎಲ್ಲಾ ಅರ್ಹ ರೈತರಿಗೆ ಈ ತಿಂಗಳ ಅಂತ್ಯದ ವೇಳೆಗೆ ಯಶಸ್ವಿನಿ ಕಾರ್ಡ್ ವಿತರಣೆ ಮಾಡಲಾಗುವುದು ಎಂದು ಸಹಕಾರ ಸಚಿವ ಕೆ. ಎನ್. ರಾಜಣ್ಣ ವಿಧಾನ ಪರಿಷತ್ತಿಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಪ್ರತಾಪ್ ಸಿಂಹ ನಾಯಕ ಅವರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಸಹಕಾರ ಸಂಘಗಳಲ್ಲಿರುವ ಎಲ್ಲಾ ರೈತರು ಇದರ ಪ್ರಯೋಜನ ಪಡೆಯಬಹುದು. ಮುಂದಿನ ದಿನಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿಯೂ ಯಶಸ್ವಿನಿ ಕಾರ್ಡುದಾರರಿಗೆ ಉಚಿತ ಚಿಕಿತ್ಸಾ ಸೌಲಭ್ಯವನ್ನು ದೊರೆಯುವಂತೆ ಮಾಡಲಾಗುವುದು ಎಂದರು.

ಈ ತಿಂಗಳ ಅಂತ್ಯದೊಳಗೆ ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಯಶಸ್ವಿನಿ ಕಾರ್ಡ್ ನೀಡುವ ಗುರಿಯನ್ನು ಹೊಂದಲಾಗಿದೆ. ಈಗಾಗಲೇ (4ನೇ ಪುಟಕ್ಕೆ)

## ಆರನೇ ವರ್ಷದ ಪುಣ್ಯಸ್ಮರಣೆ



ಲಿಂಗೈಕ್ಯ : 12.07.2017

**ಶ್ರೀ ಐ.ಪಿ. ಸೋಮನಾಥಾರಾಧ್ಯ**

ಮಾಜಿ ಅಧ್ಯಕ್ಷರು, ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಹಾಗೂ ದಾವಣಗೆರೆ ಕ್ಲಬ್

ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿ ದೀಪ.
ನಿಮ್ಮ ನೆನಪಿನಲ್ಲಿರುವ...

ಮಕ್ಕಳು, ಸೊಸೆಯಂದಿರು, ಅಳಿಯಂದಿರು,
ಮೊಮ್ಮಕ್ಕಳು ಮತ್ತು ಆರಾಧ್ಯ ಕುಟುಂಬ ವರ್ಗದವರು
ಹಾಗೂ ಬಂಧು-ಮಿತ್ರರು.

# ಜನಸಂಖ್ಯೆ ನಿಯಂತ್ರಿಸದಿದ್ದರೆ ದುಷ್ಪರಿಣಾಮಗಳು ಹೆಚ್ಚಳ

## 'ವಿಶ್ವ ಜನಸಂಖ್ಯಾ ದಿನಾಚರಣೆ' ಉದ್ಘಾಟಿಸಿದ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ



ದಾವಣಗೆರೆ, ಜು. 11- ಮನುಷ್ಯನಂತೆ ಪ್ರಪಂಚದಲ್ಲಿ ಪ್ರಾಣಿ, ಪಕ್ಷಿ, ಗಿಡ ಮರಗಳಿಗೂ ಬದುಕುವ ಹಕ್ಕಿದೆ, ಆದರೆ ಇತ್ತೀಚಿನ ದಿನಗಳಲ್ಲಿ ಜನಸಂಖ್ಯೆ ಹೆಚ್ಚಳದಿಂದ ವಾತಾವರಣ ಹಾಗೂ ಜೈವಿಕ ಸಂಪನ್ಮೂಲ, ಆರೋಗ್ಯ, ಉತ್ಪಾದನೆ ಮೇಲೂ ದುಷ್ಪರಿಣಾಮ ಬೀರಿದೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ 'ವಿಶ್ವ ಜನಸಂಖ್ಯಾ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನಸಂಖ್ಯೆ ನಿಯಂತ್ರಣ ಮಾಡುವಲ್ಲಿ ಸರ್ಕಾರವು ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಜನರು ಸರ್ಕಾರದ ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಜನಸಂಖ್ಯೆ ನಿಯಂತ್ರಣ ಮಾಡದೇ ಹೋದರೆ ಸಮಾಜದ ಆರೋಗ್ಯ, ಜನರ ಮೂಲ ಸೌಕರ್ಯಗಳ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ತಿಳಿಸಿದರು.

ಜನಸಂಖ್ಯೆ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷವು ಜು.11 ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ ಎಂದರು.

ಪ್ರಪಂಚದ ಜನಸಂಖ್ಯೆಯಲ್ಲಿ ಭಾರತವು ಚೀನಾವನ್ನು ಹಿಂದಿಕ್ಕಿ ಮೊದಲನೇ ಸ್ಥಾನದಲ್ಲಿದೆ. 1947ರಲ್ಲಿ ಶಿಶು ಮರಣ, ತಾಯಿ ಮರಣ, ಜನ ಸಾಮಾನ್ಯರ ಸಾವಿನ ಪ್ರಮಾಣ ಹೆಚ್ಚಾಗಿತ್ತು. ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಸೇವೆಗಳಿಂದಾಗಿ ಜನರ ಆರೋಗ್ಯದಲ್ಲಿ ಸುಧಾರಣೆಯಾಗಿ ಮರಣ ಪ್ರಮಾಣ ಗಣನೀಯ ಪ್ರಮಾಣದಲ್ಲಿ ತಗ್ಗಿದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್ ಮಾತನಾಡಿ, ಜನಸಂಖ್ಯೆ ನಿಯಂತ್ರಿಸಿ, ಆರೋಗ್ಯಕರ, ಸದೃಢ ದೇಶವನ್ನಾಗಿಸಲು ಕುಟುಂಬ ಕಲ್ಯಾಣ ಯೋಜನೆಗಳ ಪಾತ್ರ ಮುಖ್ಯವಾಗಿರುತ್ತದೆ. ಜನಸಂಖ್ಯೆ ಹೆಚ್ಚಳದಿಂದ ಪ್ರಕೃತಿ ಅಸಮತೋಲನ, ರೋಗಗಳು, ಜನರಿಗೆ ಮೂಲ ಸೌಕರ್ಯಗಳ ಕೊರತೆ, ಕೊಳಗೇರಿಗಳ ನಿರ್ಮಾಣ ಹೆಚ್ಚಾಗುತ್ತವೆ ಎಂದರು.

ದೇಶದಲ್ಲಿ ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿ ಮಾಡುತ್ತಿದ್ದು, ಭಾರತವು ಜನಸಂಖ್ಯೆಯಲ್ಲಿ ಗಣನೀಯವಾಗಿ (2ನೇ ಪುಟಕ್ಕೆ)

# ಕೆಟ್ಟಿರುವ ನೀರಿನ ಘಟಕದಿಂದ ಡಯಾಲಿಸಿಸ್‌ಗೆ ತೊಂದರೆ








ಹರಿಹರ, ಜು. 11 – ನಗರದ ಸಾರ್ವಜನಿಕ ಆಸ್ಪತ್ರೆಯ ಡಯಾಲಿಸಿಸ್ ಯಂತ್ರಕ್ಕೆ ನೀರು ಪೂರೈಸುವ ಘಟಕ ದುರಸ್ತಿಯಲ್ಲಿದೆ. ಇದರಿಂದಾಗಿ ಡಯಾಲಿಸಿಸ್‌ಗೆ ಬರುವ ರೋಗಿಗಳು ತೊಂದರೆ ಎದುರಿಸುತ್ತಿದ್ದಾರೆ.

ನಗರ ಆಸ್ಪತ್ರೆಗೆ ಪ್ರತಿದಿನ ಸುಮಾರು 300 ರಿಂದ 400 ರೋಗಿಗಳು ಬರುತ್ತಾರೆ. ಆದರೆ, ಡಯಾಲಿಸಿಸ್ ಯಂತ್ರಕ್ಕೆ ನೀರು ಸಮರ್ಪಕವಾಗಿ ಬರದೇ ತೀವ್ರ ಸಮಸ್ಯೆಯಾಗಿದೆ. ಡಯಾಲಿಸಿಸ್ ಅಷ್ಟೇ ಅಲ್ಲದೇ, ಹಲವಾರು ಆರೋಗ್ಯ ಸೇವೆಗಳಿಗೆ ಶುದ್ಧ ನೀರು ಸಿಗದೇ ಸಮಸ್ಯೆಯಾಗಿದೆ.

ನೀರು ಶುದ್ಧೀಕರಣ ಘಟಕ ದುರಸ್ತಿ ಮಾಡುವ ಬಗ್ಗೆ ವೈದ್ಯಾಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ಹೀಗಾಗಿ ರೋಗಿಗಳು ಹೊರಗಡೆಯಿಂದ ಹಣ ಕೊಟ್ಟು ಕುಡಿಯುವ ನೀರಿನ ಬಾಟಲಿ ಖರೀದಿಸುವ ಸ್ಥಿತಿ ಉಂಟಾಗಿದೆ. ಸಣ್ಣ ಪುಟ್ಟ ರೋಗಗಳಿಗೆ ಗುಳಿಗೆಗಳನ್ನೂ ಹೊರಗಡೆಯಿಂದ ಖರೀದಿಸುವಂತಾಗಿದೆ ಎಂದು ಹಲವಾರು ರೋಗಿಗಳು ದೂರಿದ್ದಾರೆ.

ಡಯಾಲಿಸಿಸ್ ಯಂತ್ರ ಉತ್ತಮವಾಗಿದೆ. ಆದರೆ, ನೀರಿನ ಘಟಕ ಕೆಟ್ಟಿದೆ. ಚಿಕಿತ್ಸೆಗೆ ಬಂದಾಗ ಗುಳಿಗೆ ಇತ್ಯಾದಿಗಳನ್ನು ಹೊರಗಿನಿಂದ ತರಬೇಕಿದೆ ಎಂದು ಕಿಡ್ನಿ ವೈಫಲ್ಯದ ರೋಗಿ ಚಂದ್ರಪ್ಪ ಪೂಜಾರ್ ತಿಳಿಸಿದರು.

ನೀರಿನ ಘಟಕ ಕೆಲಸ ಮಾಡುತ್ತಿಲ್ಲ. ಹೊರಗಿನಿಂದ ನೀರು ತಂದಾಗ ಆಗುವ ವೆಚ್ಚವನ್ನು ಭರಿಸುತ್ತಿಲ್ಲ. ನಿರಂತರ ನೀರಿಲ್ಲದೇ ರೋಗಿಗಳಿಗೆ ಸೇವೆ ನೀಡಲು ಸಮಸ್ಯೆಯಾಗುತ್ತಿದೆ. ನಮ್ಮ ಕಡೆಯಿಂದ ರೋಗಿಗಳಿಗೆ ಯಾವುದೇ ರೀತಿಯ ತೊಂದರೆಗಳು ಆಗುತ್ತಿಲ್ಲ ಎಂದು ಡಯಾಲಿಸಿಸ್ ಕೇಂದ್ರದ ಉಸ್ತುವಾರಿ ನಿಂಗರಾಜ್ ತಿಳಿಸಿದರು.

ಈ ಬಗ್ಗೆ ಹೇಳಿಕೆ ನೀಡಿರುವ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಹನುಮನಾಯ್ಕ, ನೀರಿನ ಘಟಕ ದುರಸ್ತಿಗಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸದ್ಯಕ್ಕೆ ಹೊರಗಡೆಯಿಂದ ನೀರು ತಂದು ಡಯಾಲಿಸಿಸ್ ಮಾಡಲು ಸೂಚನೆ ನೀಡಲಾಗಿದೆ ಎಂದಿದ್ದಾರೆ.

# ಕೆಸರು ಗದ್ದೆಯಲ್ಲಿ ಮಕ್ಕಳ ಓಡಾಟ ಬೆಳಗುತ್ತಿಯಲ್ಲಿ ರಸ್ತೆಗಾಗಿ ಪ್ರತಿಭಟನೆ



ನ್ಯಾಮತಿ, ಜು.11- ತಾಲ್ಲೂಕಿನ ಬೆಳಗುತ್ತಿ ಗ್ರಾಮದ ಹೊರವಲಯದಲ್ಲಿನ ವಿದ್ಯಾವಾಹಿನಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏಳೆಂಟು ಗ್ರಾಮಗಳ 180ಕ್ಕೂ ಹೆಚ್ಚು ವಿದ್ಯಾರ್ಥಿಗಳ ಓಡಾಟಕ್ಕೆ ಸಮರ್ಪಕ ರಸ್ತೆ ನಿರ್ಮಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಶಾಲೆಗೆ ಓಡಾಡುವ ರಸ್ತೆ ಮಳೆ ಬಂದರೆ ಕೆಸರು ಗದ್ದೆಯಂತಾಗುತ್ತದೆ. ಈ ಸಂಬಂಧ ಗ್ರಾಮಾಡಳಿತದ ಗಮನಕ್ಕೆ ತಂದರೂ ನಿರ್ಲಕ್ಷ್ಯ ತೋರುತ್ತಿದ್ದು, ಮಳೆ ಬಂದರೆ ವಿದ್ಯಾರ್ಥಿಗಳನ್ನು ಶಾಲೆಗೆ ಕಳುಹಿಸಿ ಕೊಡಲು ಪೋಷಕರು ಹಿಂದೇಟು ಹಾಕುತ್ತಿದ್ದಾರೆ. ಶನಿವಾರದ ಶಾಲೆಯ ನಂತರ ವಿದ್ಯಾರ್ಥಿಗಳ ನೇತೃತ್ವದಲ್ಲಿ ಕೆಸರಿನಿಂದ ಕೂಡಿದ ಬಸವೇಶ್ವರ ರಸ್ತೆಯಲ್ಲಿಯೇ ವಿದ್ಯಾರ್ಥಿಗಳ ಜಾಥಾ ಮಾಡುವ ಮೂಲಕ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಗಮನ ಸೆಳೆದರು.

ಕೆಲ ದಿನಗಳ ಹಿಂದೆ ರಸ್ತೆ ಬದಿಯಲ್ಲಿ ಪೈಪ್ ಲೈನ್‌ಗಾಗಿ ತೆಗೆದ ಕಾಲುವೆಯಿಂದಾಗಿ ಇಂದು ರಸ್ತೆಯೆಲ್ಲಾ ಕೆಸರು ಗದ್ದೆಯಂತಾಗಿದೆ. ತೆಗೆದ ಕಾಲುವೆಯ ಮಣ್ಣನ್ನು ಸರಿಯಾಗಿ ಮುಚ್ಚದ ಹಿನ್ನೆಲೆಯಲ್ಲಿ ಮಣ್ಣು ರಸ್ತೆಯ ತುಂಬೆಲ್ಲಾ ಪಸರಿಸಿ ದ್ವಿಚಕ್ರ ವಾಹನ ಸೇರಿದಂತೆ, ಪಾದಚಾರಿಗಳು ರಸ್ತೆಯಲ್ಲಿ ಬಂದರೆ ಜಾರಿ ಬೀಳುವ ಆತಂಕ ಎದುರಾಗಿದೆ.

ಮಳೆ ಬಂದರೆ ರಸ್ತೆಗಳಲ್ಲಿ ಗುಂಡಿಗಳು ನೀರಿನಿಂದ ತುಂಬಿದಾಗ ಗೊತ್ತಾಗುವುದಿಲ್ಲ, ಅಲ್ಲದೆ ರಸ್ತೆಯ ಬದಿಯಲ್ಲಿ ಎರಡು ವಿದ್ಯುತ್ ಪರಿವರ್ತಕಗಳಿದ್ದು ಓಡಾಡುವಾಗ ತುಂಬ ಎಚ್ಚರಿಕೆ ವಹಿಸಿ ಓಡಾಡಬೇಕಿದೆ ಎಂದು ಮುಖ್ಯ ಶಿಕ್ಷಕ ಸಂದೀಪ್ ಆತಂಕ ವ್ಯಕ್ತಪಡಿಸಿದರು.

**ರೈತ ಸಂಘ ಬೆಂಬಲ :** ವಿದ್ಯಾರ್ಥಿಗಳಲ್ಲದೆ ಪ್ರತಿನಿತ್ಯ ತಮ್ಮ ಜಮೀನುಗಳಿಗೆ ನೂರಾರು ಜನ ಓಡಾಡುತ್ತಾರೆ. ಬೈಕ್‌ಗಳಲ್ಲಿ ಓಡಾಡಲು ಆಗುತ್ತಿಲ್ಲ. ಗ್ರಾಮಾಡಳಿತವು ರಸ್ತೆ ದುರಸ್ತಿ ಮಾಡಿಸದಿದ್ದಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ಗ್ರಾಮಾಡಳಿತದ ಮುಂದೆ ಪ್ರತಿಭಟಿಸುವುದಾಗಿ ಅಖಂಡ ಕರ್ನಾಟಕ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಬೆಳಗುತ್ತಿಯ ಬಿ.ಎಚ್. ಉಮೇಶ್ ಎಚ್ಚರಿಸಿದ್ದಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮಾಡಳಿತ ಅಧ್ಯಕ್ಷರ ಗಮನಕ್ಕೆ ತಂದು ಶಾಶ್ವತ ಪರಿಹಾರ ಕಲ್ಪಿಸುವಂತೆ ಶಾಸಕರ ಮೂಲಕ ಮನವಿ ಮಾಡಿಕೊಳ್ಳುವ ಮೂಲಕ ವಿಶೇಷ ಅನುದಾನದಡಿ ವಿದ್ಯಾರ್ಥಿಗಳ ಸಮಸ್ಯೆಗೆ ಸ್ಪಂದಿಸುತ್ತೇವೆ ಎಂದು ಗ್ರಾಮಾಡಳಿತ ಅಧಿಕಾರಿ ಪ್ರದೀಪ್.ಎ.ಕೆ ತಿಳಿಸಿದರು.

# ಮಲೇಬೆನ್ನೂರು : ಜನಸಂಖ್ಯೆ ನಿಯಂತ್ರಣಕ್ಕೆ ಜಾಗೃತಿ ಅಗತ್ಯ



ಮಲೇಬೆನ್ನೂರು, ಜು. 11 - ಇತ್ತೀಚಿನ ದಿನಮಾನದಲ್ಲಿ ಮೂಲಭೂತ ಸೌಕರ್ಯಗಳಾದ ಶಿಕ್ಷಣ, ಆರೋಗ್ಯ ಹಾಗೂ ವಸತಿ ಸಮಸ್ಯೆ ಉಲ್ಬಣಿಸಲು ಜನಸಂಖ್ಯೆ ಹೆಚ್ಚಳವಾಗಿರುವುದು ಮುಖ್ಯ ಕಾರಣ ಎಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹೆಚ್ಚುತ್ತಿರುವ ಜನಸಂಖ್ಯೆ ನಿಯಂತ್ರಣಕ್ಕೆ ಜನಜಾಗೃತಿ ಬಹಳ ಅಗತ್ಯವಾಗಿದ್ದು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದರಿಂದಲೂ ಜನಸಂಖ್ಯೆನಿಯಂತ್ರಿಸಬಹುದು. ಮದುವೆ ಆದ ನಂತರ ಪಡೆಯುವ ಸಂತಾನ ದನಡುವೆ ಅಂತರ ಇರಬೇಕು ಇರಬೇಕೆಂದು ಡಾ ಲಕ್ಷ್ಮೀ ದೇವಿ ಹೇಳಿದರು.

ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, ಉಪತಹಶೀಲ್ದಾರ್ ಆರ್ ರವಿ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್, ಆರೋಗ್ಯ ಸುರಕ್ಷಾಧಿಕಾರಿ ಸುಧಾ ಸುಲಾಖೆ ಅವರುಗಳು ಮಾತನಾಡಿ ಜನಸಂಖ್ಯೆ ಹೆಚ್ಚುತ್ತಿರುವ ಕಾರಣನಿರ್ಮಾಣವಾಗಿರುವ ಸಮಸ್ಯೆ ಕುರಿತು ಮಾತನಾಡಿದರು. ಜನಸಂಖ್ಯೆ ನಿಯಂತ್ರಣ ಮಾಡದಿದ್ದಲ್ಲಿ ಮುಂಬರುವ ದಿನಗಳಲ್ಲಿ ಆರೋಗ್ಯ, ಶಿಕ್ಷಣ ಹಾಗೂ ಉದ್ಯೋಗ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಾಲ್ಲೂಕು ಆರೋಗ್ಯ ನಿರೀಕ್ಷಣಾಧಿಕಾರಿ ಎಂ ಉಮ್ಮಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಟಿ. ನಾಗರಾಜ್ ಜನಸಂಖ್ಯೆ ನಿಯಂತ್ರಿಸುವ ಬಗ್ಗೆ ಉಪನ್ಯಾಸ ನೀಡಿದರು.

# ವಾಣಿಜ್ಯ ತೆರಿಗೆ ಕಚೇರಿ ಸ್ಥಾಪನೆಗೆ ಶಾಸಕರು ನೇರ ಸಂಪರ್ಕಿಸಿ: ಸಿಎಂ

ಬೆಂಗಳೂರು, ಜು.11- ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರ ಕಛೇರಿ ಸ್ಥಾಪನೆಗೆ ಸಂಬಂಧಪಟ್ಟಂತೆ ಅಧಿಕಾರಿಗಳ ಜೊತೆ ಚರ್ಚಿಸುವ ಆಗತ್ಯ ಇಲ್ಲ. ತಮ್ಮ ಬಳಿಯೇ ನೇರವಾಗಿ ಮಾತನಾಡಬಹುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಸಕರಿಗೆ ಸಲಹೆ ನೀಡಿದರು.

ಪ್ರಶ್ನೋತ್ತರ ವೇಳೆಯಲ್ಲಿ ಯಶವಂತ ರಾಯಗೌಡ ವಿಠಲಗೌಡ ಪಾಟೀಲ್ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಮುಖ್ಯಮಂತ್ರಿ, ನಾನು ಹಣಕಾಸು ಇಲಾಖೆಯ ಸಚಿವನಾಗಿದ್ದೇನೆ. ನೂತನ ಕಚೇರಿ ಸ್ಥಾಪನೆಗೆ ಸಂಬಂಧಪಟ್ಟಂತೆ ಶಾಸಕರು ಆಯುಕ್ತರ ಜೊತೆಗೆ ಮಾತನಾಡುವ ಅಗತ್ಯವಿಲ್ಲ. ನನ್ನ ಜೊತೆಯೇ ನೇರವಾಗಿ ಸಮಾಲೋಚನೆ ಮಾಡಬಹುದು ಎಂದರು.

ಆಯುಕ್ತರು ಹೇಳಿದಾಕ್ಷಣ ನಾನು ಕೇಳಬೇಕೆಂದು ಇಲ್ಲ, ಎಲ್ಲದಕ್ಕೂ ನಿಯಮ ಇದೆ. 5 ಸಾವಿರಕ್ಕಿಂತ ಹೆಚ್ಚು ವರ್ತಕರು ಇರುವ ಕಡೆ ಒಂದು ಸಹಾಯಕ ಆಯುಕ್ತರ ಕಛೇರಿಯನ್ನು ಆರಂಭಿಸಲು ಅವಕಾಶವಿದೆ ಎಂದರು.

ವಾಣಿಜ್ಯ ತೆರಿಗೆ ಇಲಾಖೆ ರಾಜ್ಯದಲ್ಲಿ 386 ಸಹಾಯಕ ಆಯುಕ್ತರ ಕಛೇರಿಗಳನ್ನು ಹೊಂದಿದೆ. 2017ರ ಜು.1 ರಿಂದ ಜಿಎಸ್‌ಟಿ ಅನುಷ್ಠಾನಕ್ಕೆ ಬಂದಿದೆ. ಅದಕ್ಕೂ ಮೊದಲು 5.77 ಲಕ್ಷ ನೋಂದಾಯಿತ ವರ್ತಕರು ಇದ್ದರು. ಅವರನ್ನು ಒಳಗೊಂಡು ಈಗ 9 ಲಕ್ಷ ನೋಂದಾಯಿತ ವರ್ತಕರು ಇದ್ದಾರೆ ಎಂದು ಅವರು ವಿವರಿಸಿದರು.

# ಆನ್ಲೈನ್, ಕ್ಯಾಸಿನೋ, ಕುದುರೆ ರೇಸ್‌ಗೆ ಶೇ.28ರ ಜಿಎಸ್‌ಟಿ

**(1ನೇ ಪುಟದಿಂದ)** ಬೆಟ್ಟಿಂಗ್‌ನ ಪೂರ್ಣ ಮೌಲ್ಯದ ಮೇಲೆ ಶೇ.28ರ ತೆರಿಗೆ ವಿಧಿಸಲಾಗುವುದು ಎಂದಿದ್ದಾರೆ. ಆನ್‌ಲೈನ್ ಆಟಗಳಿಗೆ ಸಂಬಂಧಿಸಿದಂತೆ ಕೌಶಲ್ಯದ ಆಟ ಹಾಗೂ ಲಾಟರಿ ಆಟಗಳ ನಡುವಿನ ವ್ಯತ್ಯಾಸವನ್ನು ತೆಗೆದು ಹಾಕಲೂ ಸಹ ಮಂಡಳಿ ನಿರ್ಧರಿಸಿದೆ.

# ಜಿಎಸ್‌ಟಿ ಜಾಲದಲ್ಲಿ ಇಡಿ ಸೇರ್ಪಡೆಗೆ ವಿರೋಧ

**(1ನೇ ಪುಟದಿಂದ)** ಎಂದು ಒತ್ತಾಯಿಸಿದ್ದಾರೆ ಎಂದು ದೆಹಲಿ ಹಣಕಾಸು ಸಚಿವೆ ಆತಿಶಿ ಮರ್ಲೀನ ಹೇಳಿದ್ದಾರೆ.

ಉದ್ಯಮಿಗಳು ಜಿ.ಎಸ್.ಟಿ. ಪಾವತಿಸದೇ ಇದ್ದರೆ ಜಾರಿ ನಿರ್ದೇಶನಾಲಯ ಅವರನ್ನು ವಶಕ್ಕೆ ತೆಗೆದುಕೊಳ್ಳಬಹುದು. ಇದು ತೆರಿಗೆ ಉಗ್ರವಾದಕ್ಕೆ ದಾರಿ ಮಾಡಿಕೊಡುತ್ತದೆ. ಇದು ಸಣ್ಣ ಉದ್ಯಮಗಳು ಹಾಗೂ ಜನ ಸಾಮಾನ್ಯರಿಗೆ ಅಪಾಯಕಾರಿ ಎಂದು ಚೀಮಾ ಹೇಳಿದ್ದಾರೆ. ಇ.ಡಿ. ದುರುಪಯೋಗ ವಾಗುತ್ತಿರುವುದನ್ನು ನಾವೆಲ್ಲ ನೋಡಿದ್ದೇವೆ. ಈಗ ಜಿ.ಎಸ್.ಟಿ. ನೋಂದಾಯಿತ ಉದ್ಯ ಮಿಗಳು ಹಾಗೂ ವ್ಯಾಪಾರಿಗಳು ಪೀಡನೆ ಎದುರಿಸುತ್ತಾರೆ. ನಾವು ಈ ಅಧಿಸೂಚನೆ ವಿರೋಧಿಸುತ್ತೇವೆ ಎಂದು ಆತಿಶಿ ಹೇಳಿದ್ದಾರೆ. ಅಕ್ರಮ ಹಣ ಮಾರ್ಗದ ಮೂಲಕ ಜಿ.ಎಸ್.ಟಿ. ತೆರಿಗೆ ವಂಚಿಸುವುದನ್ನು ತಡೆಯುವ ಸಲುವಾಗಿ ಜಾರಿ ನಿರ್ದೇಶನಾಲಯವೂ ಜಿ.ಎಸ್.ಟಿ. ಜಾಲದ ಜೊತೆ ಮಾಹಿತಿ ಹಂಚಿಕೊಳ್ಳಲು ಕೇಂದ್ರ ಸರ್ಕಾರ ಅವಕಾಶ ನೀಡಿತ್ತು.

# ರಾಹುಲ್ ವಿರುದ್ಧ ಬಿಜೆಪಿ ದ್ವೇಷ ರಾಜಕಾರಣ : ನಗರದಲ್ಲಿ ಇಂದು ಕಾಂಗ್ರೆಸ್ ಪ್ರತಿಭಟನೆ

ಕೇಂದ್ರ ಬಿಜೆಪಿ ಸರ್ಕಾರ ನ್ಯಾಯಾಂಗ ವ್ಯವಸ್ಥೆ ಬಳಸಿಕೊಂಡು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ದ್ವೇಷ ರಾಜಕಾರಣ ಮಾಡುತ್ತಿರುವುದನ್ನು ವಿರೋಧಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಇಂದು ಬುಧವಾರ ಬೆಳಗ್ಗೆ 10.30 ರಿಂದ ಮಹಾನಗರ ಪಾಲಿಕೆ ಮುಂಭಾಗ ಮೌನ ಪ್ರತಿಭಟನೆಯನ್ನು ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪನವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

# ಮತ್ತೊಂದು ಚೀತಾ ಸಾವು

ಭೂಪಾಲ್, ಜು. 11 – ಆಫ್ರಿಕಾದಿಂದ ತರಿಸಲಾಗಿದ್ದ ತೇಜಸ್ ಹೆಸರಿನ ಚೀತಾ ಮಧ್ಯ ಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನದಲ್ಲಿ ಸಾವನ್ನಪ್ಪಿದೆ. ಚೀತಾಗಳ ನಡುವಿನ ಘರ್ಷಣೆಯೇ ಇದಕ್ಕೆ ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಳೆದ ಫೆಬ್ರವರಿಯಲ್ಲಿ ದಕ್ಷಿಣ ಆಫ್ರಿಕಾದಿಂದ ಈ ಚೀತಾ ತರಿಸಲಾಗಿತ್ತು. ಈ ಹಿಂದೆ ಮೂರು ಚೀತಾಗಳು ಹಾಗೂ ಮೂರು ಮರಿಗಳು ಸಾವನ್ನಪ್ಪಿದ್ದವು.

# ಹರಪನಹಳ್ಳಿಯ ಎಸ್.ಯು.ಜೆ.ಎಂ. ಕಾಲೇಜಿನ ಪ್ರಾಂಶುಪಾಲರಾಗಿ ಹೆಚ್. ಮಲ್ಲಿಕಾರ್ಜುನ್



ಹರಪನಹಳ್ಳಿ, ಜು. 11 - ಪಟ್ಟಣದ ಎಸ್.ಯು.ಜೆ.ಎಂ. ಕಾಲೇಜಿನ ಪ್ರಾಚಾರ್ಯರಾಗಿ ಕನ್ನಡ ಉಪನ್ಯಾಸಕ ಹೆಚ್. ಮಲ್ಲಿಕಾರ್ಜುನ ಜವಾಬ್ದಾರಿ ಸ್ವೀಕರಿಸಿದರು.

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಕೂಬಿಹಾಳ ಗ್ರಾಮದಲ್ಲಿರುವ ಎಸ್.ಯು.ಎಸ್.ಜೆ. ಕಾಲೇಜಿನಲ್ಲಿ ಎರಡು ವರ್ಷ ಸೇವೆ ಸಲ್ಲಿಸಿ, ಹರಪನಹಳ್ಳಿ ಎಸ್.ಯು.ಜೆ.ಎಂ. ಕಾಲೇಜಿಗೆ ವರ್ಗಾವಣೆಗೊಂಡಿದ್ದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಎಚ್.ಬಿ. ಸೋಮರೆಡ್ಡಿ, ಎಸ್ ಚನ್ನಬಸಪ್ಪ, ಎಮ್. ಚಿಕ್ಕಪ್ರಸಾದ, ಎಸ್. ಕೊಟ್ರೇಶ್, ಆತ್ಮಾನಂದ, ಸಿ. ಪ್ರವೀಣ, ಟಿ.ಎಂ. ಜಯದೀಪ ಮುಂತಾದವರು ಉಪಸ್ಥಿತರಿದ್ದರು. ಪ್ರಭಾರಿ ಪ್ರಾಚಾರ್ಯರಾಗಿದ್ದ ಬಿ. ಕೃಷ್ಣಮೂರ್ತಿ ಅವರು ಅಧಿಕಾರ ಹಸ್ತಾಂತರಿಸಿದರು.

# ಲಕ್ಕಶೆಟ್ಟಿಹಳ್ಳಿ : ಕಾಳಿಕಾ ದೇವಿ ಗ್ರಾಮ ದೇವತೆ ಅಮ್ಮನ ಹಬ್ಬ



ಮಲೇಬೆನ್ನೂರು, ಜು. 11 - ಲಕ್ಕಶೆಟ್ಟಿಹಳ್ಳಿ ಗ್ರಾಮದ ಗ್ರಾಮ ದೇವತೆ ಶ್ರೀ ಕಾಳಿಕಾ ದೇವಿ ಅಮ್ಮನ ಹಬ್ಬಕ್ಕೆ ಕೋಣವನ್ನು ಬಿಡುವ ಹಾಗೂ ಭಂಡಾರ ಹಿಡಿಯುವ ಕಾರ್ಯಕ್ಕೆ ಮಂಗಳವಾರ ವಿಧ್ಯುಕ್ತವಾಗಿ ಚಾಲನೆ ನೀಡಲಾ ಯಿತು.

ಬರುವ 2024ನೇ ಏಪ್ರಿಲ್ 2 ಮತ್ತು 3 ರಂದು ಕಾಳಿಕಾದೇವಿ ಅಮ್ಮನ ಹಬ್ಬವನ್ನು ಆಚರಿಸಲು ಊರಿನ ಗ್ರಾಮಸ್ಥರೆಲ್ಲರೂ ಸೇರಿದ್ದ ಸಭೆಯಲ್ಲಿ ತೀರ್ಮಾನಿಸಿದ್ದರು.

ಈ ಹಿನ್ನೆಲೆಯಲ್ಲಿ ಊರಿನ ಗೌಡ್ರು ಮತ್ತು ಬಣಕಾರ ಮನೆಯಲ್ಲಿ ಪೂಜೆ ಸಲ್ಲಿಸಿದ ನಂತರ ಹಲಿಗೆ ಭಾರಿಸಿ ಊರಿನ ತುಂಬಾ ಮೆರವಣಿಗೆ ಮಾಡಿ, ನಂತರ ಊರಿನ ಹೊರಗೆ ಇರುವ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಕೋಣಗೆ ಭಂಡಾರ ಹಚ್ಚಿ ಬಿಡಲಾಯಿತು.

# ಎಂ.ಪಿ.ಪ್ರಕಾಶ್ ಸಜ್ಜನ ರಾಜಕಾರಣಿ, ಸಾಂಸ್ಕೃತಿಕ ರಾಯಭಾರಿ



**ಹರಪನಹಳ್ಳಿ : ಎಂಪಿಪಿ 83ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ನುಡಿ ನಮನ**

ಹರಪನಹಳ್ಳಿ,ಜು.11- ರಾಜಕಾರಣದ ಸಂಸ್ಕಾರ ಬಿಟ್ಟು ಹೋಗದಿರುವುದಕ್ಕೆ ದಿ.ಎಂ.ಪಿ. ಪ್ರಕಾಶ್ ಅವರು ಮುಖ್ಯಮಂತ್ರಿಯಾಗಲಿಲ್ಲ ಎಂದು ಜಿ.ಪಂ. ಮಾಜಿ ಸದಸ್ಯ ಪಿ. ಮಹಾಬಲೇಶ್ವರ ಗೌಡರು ಹೇಳಿದರು.

ಪಟ್ಟಣದ ಕಾಶಿ ಬಡಾವಣೆಯಲ್ಲಿರುವ ಶಾಸಕರಾದ ಎಂ.ಪಿ.ಲತಾ ಅವರ ಕಚೇರಿಯಲ್ಲಿ ದಿ. ಎಂ.ಪಿ.ರವೀಂದ್ರ ಪ್ರತಿಷ್ಠಾನದಿಂದ ಮಾಜಿ ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ್‌ರವರ 83ನೇ ಜನ್ಮದಿನೋತ್ಸವದ ನಿಮಿತ್ತ ಇಂದು ಹಮ್ಮಿಕೊಂಡಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಂ.ಪಿ.ಪ್ರಕಾಶ್ ಅವರು ಸುಸಂಸ್ಕೃತ ಸಜ್ಜನ ರಾಜಕಾರಣಿಯಾಗಿದ್ದರು. ರಾಜಕೀಯ ದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು.

ಮಲ್ಲಿಗೆ ನಾಡಿನ ರೂವಾರಿ, ಹುಲಿಗುಡ್ಡದ ಏತ ನೀರಾವರಿಯ ಹರಿಕಾರ, ದೀನ ದಲಿತರ ಆಶಾ ಕಿರಣವಾಗಿದ್ದರು.

ಅದೇ ರೀತಿ ಅವರ ಪುತ್ರ ದಿ.ಎಂ.ಪಿ. ರವೀಂದ್ರ ಅವರು ಹರಪನಹಳ್ಳಿ ತಾಲ್ಲೂಕಿಗೆ 371 ಜೆ ಸೌಲಭ್ಯ ಒದಗಿಸಿಕೊಟ್ಟು ಜನಾನುರಾಗಿಯಾಗಿದ್ದು, ಪ್ರಕಾಶ್‌ರವರ ಹಿರಿಯ ಪುತ್ರಿ ಎಂ.ಪಿ.ಲತಾ ಅವರು ತಂದೆ ಹಾಗೂ ಸಹೋದರರ ಹಾದಿಯಲ್ಲಿ ಸಾಗಿದ್ದಾರೆ ಎಂದು ಹೇಳಿದರು.

ಎಂ.ಪಿ.ಪ್ರಕಾಶ್‌ರವರು ಎಲ್ಲಾ ವರ್ಗದ ಜನರೊಂದಿಗೆ ಬೆರೆಯುವ ಮೂಲಕ ಹಡಗಲಿಯನ್ನು ಸಮಗ್ರ ಅಭಿವೃದ್ಧಿ ಮಾಡಿ, ಅವರದೇ ಆದ ಕೊಡುಗೆ ನೀಡಿ ಹೋಗಿದ್ದಾರೆ, ಅದೇ ರೀತಿ ಹರಪನಹಳ್ಳಿ ತಾಲ್ಲೂಕು ಮಾಜಿ ಶಾಸಕ ದಿ.ಇಜಾರಿ ಶಿರಸಪ್ಪನವರು ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ಕೆ. ಪ್ರಕಾಶ್ ಮಾತನಾಡಿ, ಎಂ.ಪಿ.ಪ್ರಕಾಶ್‌ರವರು ರಾಜಕೀಯ ಅಷ್ಟೇ ಅಲ್ಲದೆ ಸಾಹಿತ್ಯ, ರಂಗಭೂಮಿ, ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ ಸಾಕಷ್ಟು ಜ್ಞಾನವನ್ನು ಹೊಂದಿದ್ದು, ಕಿರಿಯ ರಾಜಕಾರಣಿಗಳಿಗೆ ಮಾರ್ಗದರ್ಶಕರಾಗಿದ್ದರು. ನನಗೂ ಸಹ ಅವರು ಅನೇಕ ರಾಜಕೀಯ ಸಲಹೆ, ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದರು ಎಂದು ಹೇಳಿದರು.


ನ್ಯಾಯವಾದಿ ಕಣಿವಿಹಳ್ಳಿ ಮಂಜುನಾಥ ಮಾತನಾಡಿ, ಕರ್ನಾಟಕಕ್ಕೆ ಎಂ.ಪಿ. ಪ್ರಕಾಶ್‌ರವರ ಕೊಡುಗೆ ಅಪಾರವಾಗಿದ್ದು, ಹಂಪಿ ವಿ.ವಿ., ಹುಲಿಗುಡ್ಡ ಏತ ನೀರಾವರಿ ಯೋಜನೆ, ಹಂಪಿ ಉತ್ಸವಗಳ ರೂವಾರಿಯಾಗಿದ್ದರು ಎಂದರು.

ಸಾಹಿತಿ ಇಸ್ಮಾಯಿಲ್ ಎಲಿಗಾರ ಮಾತನಾಡಿ, ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ನೆನಪಿಡುವಂತಹ ಕೆಲವೇ ರಾಜಕಾರಣಿಗಳಲ್ಲಿ ಎಂ.ಪಿ.ಪ್ರಕಾಶ್‌ರವರು ಒಬ್ಬರಾಗಿದ್ದರು. ರಂಗಭೂಮಿ, ಸಾಹಿತ್ಯ, ಸಂಸ್ಕೃತಿಯಲ್ಲಿ ಆಸಕ್ತಿ ಹೊಂದಿದ್ದ ಅವರದು ಬಹುಮುಖ ಪ್ರತಿಭೆ ಎಂದು ಬಣ್ಣಿಸಿದರು.

ಕೆ.ಚಂದ್ರೇಗೌಡ್ರು, ಅರಸೀಕೆರೆ ನಾಗರಾಜ, ವೈ.ಕೆ.ಬಿ.ದುರುಗಪ್ಪ, ಕಂಚಿಕೇರಿ ಜಯಲಕ್ಷ್ಮಿ, ನಿಚ್ಚವ್ವನಹಳ್ಳಿ ಪರಶುರಾಮಪ್ಪ, ಎಂ.ಪಿ.ನಾಯ್ಕ, ಇತರರು ಎಂ.ಪಿ.ಪ್ರಕಾಶ್‌ರವರ ಬಗ್ಗೆ ನುಡಿ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಎಂ.ವಿ. ಅಂಜಿನಪ್ಪ, ಗಣೇಶ ಪೈಲ್ವಾನ್, ಮುಖಂಡರಾದ ಕೆ.ಜಗದಪ್ಪ, ತೆಲಗಿ ಉಮಾಕಾಂತ, ಗುಂಡಗತ್ತಿ ಎಚ್. ವಸಂತಪ್ಪ, ಚಿಕ್ಕೇರಿ ಬಸಪ್ಪ, ಎಚ್.ಎಸ್.ಅಮಾನುಲ್ಲಾ, ನೇತ್ರಾವತಿ, ರೇಣುಕಾ ಮಂಜುನಾಥ, ಹುಲಿಕಟ್ಟೆ ಚಂದ್ರಪ್ಪ, ಹರಿಯಮ್ಮನಹಳ್ಳಿ ಶಿವರಾಜ, ನಿಟ್ಟೂರು ಹನುಮಂತಪ್ಪ ಸೇರಿದಂತೆ, ಇತರರು ಇದ್ದರು.

## ಸೋಮವಾರಪೇಟೆ ಕೆ.ಸಿ. ಹರೀಶ್ ನಿಧನ



ದಾವಣಗೆರೆ ಎಂ.ಸಿ.ಸಿ. "ಬಿ" ಬ್ಲಾಕ್, # 3174, 10th ಮೇನ್ ನಿವಾಸಿ

**ಸೋಮವಾರಪೇಟೆಯ ಕೆ.ಸಿ. ಹರೀಶ್**

ಅವರು ದಿನಾಂಕ 11-07-2023ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಲಿಂಗೈಕ್ಯರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಒಬ್ಬ ಮಗ, ಸೊಸೆ, ಒಬ್ಬ ಮಗಳು, ಅಳಿಯ, ಇಬ್ಬರು ಮೊಮ್ಮಕ್ಕಳು ಹಾಗೂ ಅಪಾರ ಬಂಧು- ಬಳಗ, ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತಿಮ ದರ್ಶನಕ್ಕೆ ನಾಳೆ ದಿನಾಂಕ 12 ರ ಬುಧವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಎಂಸಿಸಿ "ಬಿ" ಬ್ಲಾಕ್, # 3174, 10ನೇ ಮೇನ್‌ನಲ್ಲಿರುವ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.

**ಮೃತರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 2 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ, (ಗ್ಲಾಸ್ ಹೌಸ್ ಹತ್ತಿರ) ಏರ್ಪಡಿಸಲಾಗಿದೆ.**

**ದುಃಖತಪ್ತ ಕುಟುಂಬ ವರ್ಗ : 98806 20002 (ಆನಂದ್. ಜೆ. ಶೆಟ್ರು)**

## 11ನೇ ವರ್ಷದ ಪುಣ್ಯಸ್ಮರಣೆ



**ಲಿಂ. ಜಕ್ಕ ಪಿ. ನಾರಾಯಣಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ (12.7.2023) ಹನ್ನೊಂದು ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ವ್ಯಕ್ತಿತ್ವ, ಮಾರ್ಗದರ್ಶನ ಹಾಗೂ ಆಶೀರ್ವಾದದೊಂದಿಗೆ
ಮುನ್ನಡೆಯುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಪತ್ನಿ : ಪದ್ದಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

# ಜನಸಂಖ್ಯೆ : ದುಷ್ಪರಿಣಾಮ ಹೆಚ್ಚಳ

**(1ನೇ ಪುಟದಿಂದ)** ಏರಿಕೆ ಕಂಡಿದೆ. ಜನಸಂಖ್ಯೆ ನಿಯಂತ್ರಣದ ಬಗ್ಗೆ ವಿದ್ಯಾರ್ಥಿಗಳು ಸಮಾಜದಲ್ಲಿ ಹೆಚ್ಚಿನ ರೀತಿಯಲ್ಲಿ ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿಶ್ವ ಜನಸಂಖ್ಯೆ ದಿನಾಚರಣೆಯ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರೇಣುಕಾರಾಧ್ಯ, ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ನಟರಾಜ್, ಕುಷ್ಠ ರೋಗ ನಿಯಂತ್ರಣಾಧಿಕಾರಿ ಡಾ. ಮುರುಳೀಧರ್, ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ. ಮೀನಾಕ್ಷಿ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ದೇವರಾಜ್ ಪಟಿಲಿ, ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಶುಪಾಲರಾದ ಡಾ.ಕೆ.ಟಿ. ನಾಗರಾಜ ನಾಯ್ಕ್, ಡಾ.ಜಯರಾಜ್, ಮಿಥುನ್, ಆಶಾ ಕಾರ್ಯಕರ್ತೆಯರು ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಜಾಗೃತಿ ಜಾಥಾ:** ವಿಶ್ವ ಜನಸಂಖ್ಯೆ ದಿನಾಚರಣೆ ಅಂಗವಾಗಿ ಜನ ಜಾಗೃತಿ ಜಾಥಾಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.

ಚಿಕ್ಕ ಕುಟುಂಬ, ಚೊಕ್ಕ ಕುಟುಂಬ, ಯೋಜಿತ ಪರಿವಾರ, ಸುಖ ಅಪಾರ, ಹೆಣ್ಣಿರಲಿ ಗಂಡಿರಲಿ ಮಗು ಒಂದೇ ಇರಲಿ ಎಂಬ ಘೋಷಣೆಗಳೊಂದಿಗೆ ಜಾಥಾ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ, ಹದಡಿ ರಸ್ತೆ, ವಿದ್ಯಾನಗರ ಮೂಲಕ ಸಾಗಿತು.

# ಮಾಜಿ ಉದ್ಯೋಗಿಯಿಂದ ಉದ್ಯಮಿ ಹತ್ಯೆ

ಬೆಂಗಳೂರು, ಜು. 11 – ಖಾಸಗಿ ಉದ್ಯಮವೊಂದರ ವ್ಯವಸ್ಥಾಪಕ ನಿರ್ದೇಶಕ ಹಾಗೂ ಕಾರ್ಯನಿರ್ವಹಣಾಧಿಕಾರಿಗಳನ್ನು ಮಾಜಿ ಉದ್ಯೋಗಿ ಹಾಡು ಹಗಲೇ ಬರ್ಬರವಾಗಿ ಹತ್ಯೆಗೈದ ಘಟನೆ ನಡೆದಿದೆ. ಏರೋನಿಕ್ಸ್ ಮೀಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಫಣೀಂದ್ರ ಸುಬ್ರಮಣ್ಯ ಹಾಗೂ ಸಿಇಒ ವಿನು ಕುಮಾರ್ ಅವರು ಹತ್ಯೆಗೀಡಾಗಿದ್ದಾರೆ. ಏರೋನಿಕ್ಸ್ ಕಚೇರಿಗೆ ನುಗ್ಗಿದ ಆರೋಪಿ ಉಭಯರ ಮೇಲೆ ತೀವ್ರ ಹಲ್ಲೆ ನಡೆಸಿದ್ದಾನೆ. ಆಸ್ಪತ್ರೆಗೆ ಸಾಗಿಸುವ ವೇಳೆ ಉಭಯರು ಸಾವನ್ನಪ್ಪಿದ್ದಾರೆ. ಇಲ್ಲಿನ ಅಮೃತಹಳ್ಳಿಯಲ್ಲಿರುವ ಪಂಪ ಬಡಾವಣೆಯಲ್ಲಿ ಘಟನೆ ನಡೆದಿದೆ. ಹತ್ಯೆ ಮಾಡಿರುವ ಫೆಲಿಕ್ಸ್ ಎಂಬಾತ ಮೊದಲು ಇದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ನಂತರ ತಾನೇ ಪ್ರತ್ಯೇಕ ಉದ್ಯಮ ಆರಂಭಿಸಿದ್ದ. ಆರೋಪಿ ಪಲಾಯನ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

# ಇ.ಡಿ. ನಿರ್ದೇಶಕರ ಅವಧಿ ವಿಸ್ತರಣೆ ಕಾನೂನು ಬಾಹಿರ : ಸುಪ್ರೀಂ ಕೋರ್ಟ್

ನವದೆಹಲಿ, ಜು. 11 - ಜಾರಿ ನಿರ್ದೇಶನಾಲಯದ (ಇ.ಡಿ.) ಹಾಲಿ ನಿರ್ದೇಶಕರ ಅವಧಿಯನ್ನು 3 ನೇ ಬಾರಿಗೆ ವಿಸ್ತರಣೆ ಮಾಡಿರುವುದು ಕಾನೂನು ಬಾಹಿರ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹಾಲಿ ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವಧಿಯನ್ನು ಜು.31 ಕ್ಕೆ ನಿಗದಿಪಡಿಸಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಅಧಿಕಾರಿಗಳ ವರ್ಗಾವಣೆಯಲ್ಲಿ ಭ್ರಷ್ಟಾಚಾರ

## ಬಿಜೆಪಿ ಆರೋಪದಿಂದ ಸದನದಲ್ಲಿ ಕೋಲಾಹಲ

ಬೆಂಗಳೂರು, ಜು. 11 - ಅಧಿಕಾರಿಗಳ ವರ್ಗಾವಣೆಯಲ್ಲಿ ಭಾರೀ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆರೋಪ ವಿಧಾನಸಭೆಯಲ್ಲಿ ಕೋಲಾಹಲಕ್ಕೆ ಎಡೆಮಾಡಿಕೊಟ್ಟು ಎರಡು ಬಾರಿ ಸದನವನ್ನು ಮುಂದೂಡಿದ ಪ್ರಸಂಗ ಜರುಗಿತು.

ಶೂನ್ಯವೇಳೆಯಲ್ಲಿ ಬಿಜೆಪಿಯ ಹಿರಿಯ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಮಾಡಿದ ಆರೋಪ, ಆಡಳಿತ ಮತ್ತು ಬಿಜೆಪಿ ಸದಸ್ಯರ ನಡುವೆ ಕಾವೇರಿದ ಮಾತಿನ ಚಕಮಕಿ ನಡೆದು ಹಣಕಾಸು ವಹಿವಾಟು ಬಗ್ಗೆ ಆರೋಪ-ಪ್ರತ್ಯಾರೋಪ ಕೇಳಿಬಂದವು.

ಬಿಜೆಪಿ ಸದಸ್ಯರ ಆರೋಪವನ್ನು ಸಾರಾ ಸಗಟಾಗಿ ತಿರಸ್ಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಿಮ್ಮ ಆಡಳಿತದಲ್ಲಿ ನಡೆದ ಭ್ರಷ್ಟಾಚಾರಕ್ಕೆ ಬೇಸತ್ತು ನಿಮ್ಮನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಿಸಿ, ನಮ್ಮನ್ನು ಈ ಸ್ಥಾನಕ್ಕೆ ತಂದಿದ್ದಾರೆ ಎಂದರು.

ಅಧಿಕಾರ ಕಳೆದುಕೊಂಡರೂ ನೀವು ಭ್ರಷ್ಟಾಚಾರದ ಗುಂಗಿನಿಂದ ಹೊರಬಂದಿಲ್ಲ. ಯಾವುದೇ ಅಧಿಕಾರಿಯ ವರ್ಗಾವಣೆಯಾದರೂ ನಿಮಗೆ ಹಳೆಯ ನೆನಪಾಗಿ ಅದೇ ಇಲ್ಲೂ ನಡೆದಿರಬಹುದು ಎಂಬ ಭ್ರಮೆಯಲ್ಲಿದ್ದೀರಿ. ಈ ಭ್ರಮೆಯಿಂದ ಹೊರಬಂದು, ಉತ್ತಮ ಆಡಳಿತ ನೀಡಲು ಕೈಜೋಡಿಸಿ. ನಿಮ್ಮ ಇಂಥ ಆಟಾಟೋಪ ನಮ್ಮ ಮುಂದೆ ನಡೆಯುವುದಿಲ್ಲ ಎಂದು ಕಿಡಿಕಾರಿದರು.

ವಿಜಯಪುರ ಮಹಾನಗರ ಪಾಲಿಕೆ ಆಯುಕ್ತರ ವರ್ಗಾವಣೆ ವಿಚಾರ ಪ್ರಸ್ತಾಪಿಸಿದ ಯತ್ನಾಳ್, ಅರ್ಹತೆ ಇಲ್ಲದ ಅಧಿಕಾರಿಯನ್ನು ಆ ಸ್ಥಾನಕ್ಕೆ ತಂದಿದ್ದೀರಿ ಅವರನ್ನು ಮೊದಲು ವರ್ಗಾವಣೆ ಮಾಡಿ ನೀವು ಎಲ್ಲ ವ್ಯಾಪಾರವನ್ನು ಮುಂದಿಟ್ಟುಕೊಂಡೇ ವರ್ಗಾವರ್ಗಿ ನಡೆಯುತ್ತಿದೆ ಎಂದು ಬಲವಾಗಿ ಆರೋಪಿಸಿದರು.

ಸದಸ್ಯರ ಆರೋಪಕ್ಕೆ ಕೆಂಡಾಮಂಡಲವಾದ ಮುಖ್ಯಮಂತ್ರಿ, ಬಾಯಿಗೆ ಬಂದಂತೆ ಮಾತನಾಡಬಾರದು. ನಮಗೂ ಪ್ರಮುಖ ಸ್ಥಾನಗಳಲ್ಲಿ ಒಳ್ಳೆಯವರನ್ನು ಕೂರಿಸಬೇಕೆಂಬ ಇರಾದೆ ಇದೆ ಎಂದರು.

ಇದೊಂದು ನಿರಂತರ ಪ್ರಕ್ರಿಯೆ. ಅದಕ್ಕೆ ಬಣ್ಣ ಹಚ್ಚುವ ಕೆಲಸ ಮಾಡಬೇಡಿ ಎಂದಾಗ ಮಧ್ಯೆ ಪ್ರವೇಶಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ನಾವು ಎಲ್ಲವೂ ಕಾನೂನು ಪ್ರಕಾರ ಮಾಡಿದ್ದೇವೆ. ನೇಮಕ ಮಾಡಿರುವ ಅಧಿಕಾರಿಯನ್ನು ಬದಲಾವಣೆ ಮಾಡುವುದಿಲ್ಲ ಎಂದು ಖಾರವಾಗಿ ತಿಳಿಸಿದರು.

ಇದರಿಂದ ರೊಚ್ಚಿಗೆದ್ದ ಯತ್ನಾಳ್ ಸಚಿವರು ಹಾಗೂ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆ ಸುರಿಸಿದರು.

ಇದಕ್ಕೆ ಬಿಜೆಪಿಯ ಇತರೆ ಸದಸ್ಯರು ಬೆಂಬಲ ವ್ಯಕ್ತಪಡಿಸಿ ಸಚಿವರು ಆಡಿರುವ ಮಾತನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ಧರಣಿ ಆರಂಭಿಸಿದರು.

ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿದ ಉಪ ಮುಖ್ಯಮಂತ್ರಿಗಳು, ಯತ್ನಾಳ್ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಅವರ ಆಡಳಿತವಿದ್ದಾಗ ಮುಖ್ಯಮಂತ್ರಿ ಹುದ್ದೆ 2500 ಕೋಟಿ ರೂ.ಗೆ ಮಾರಾಟಕ್ಕಿದೆ ಎಂದು ಹೇಳಿದ್ದರು. ಇವರ ಹೇಳಿಕೆಯನ್ನು ಅವರ ಪಕ್ಷ ಗಂಭೀರವಾಗಿ ಪರಿಗಣಿಸಲಿಲ್ಲ. ನಾನಾಗಿದ್ದರೆ, ಅಂದೇ ಅವರನ್ನು ಪಕ್ಷದಿಂದ ವಜಾ ಮಾಡುತ್ತಿದ್ದೆ ಎಂದರು.

ನಿಮ್ಮ ಆಡಳಿತದಲ್ಲಿ ನಡೆದಿರುವುದನ್ನು ನಾವು ಸರಿಪಡಿಸುತ್ತಿದ್ದೇವೆ. ಆದರೆ, ನೀವು ಇದನ್ನೇ ಭ್ರಷ್ಟಾಚಾರದ ಬಣ್ಣಕ್ಕೆ ತಿರುಗುಸುತ್ತೀರಿ ಎಂದು ಹರಿಹಾಯ್ದರು.

ಯತ್ನಾಳ್ ಬೆಂಬಲಕ್ಕೆ ನಿಂತ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಅರ್ಹತೆ ಇಲ್ಲದ ಅಧಿಕಾರಿ ಹಾಕಿದ್ದಾರೆ ಎಂದು ಅವರು ಹೇಳಿದ್ದಾರೆ. ಯಾವ ಆಧಾರದ ಮೇಲೆ ಆ ಅಧಿಕಾರಿ ವರ್ಗಾವಣೆ ಮಾಡಿದ್ದೀರಿ ಎಂದು ಪ್ರಶ್ನಿಸಿದರು.

ಈ ಹಂತದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ಏರಿದ ದನಿಯಲ್ಲಿ ವಾಗ್ವಾದ ನಡೆದು ಸದನ ಗದ್ದಲ, ಗೊಂದಲದ ಗೂಡಾಯಿತು.

ಆಡಳಿತ ಪಕ್ಷದ ಸದಸ್ಯ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಯತ್ನಾಳ್ ಮಾತ್ರ ಸತ್ಯಹರಿಶ್ಚಂದ್ರರು ಉಳಿದವರು ವ್ಯಾಪಾರಕ್ಕೆ ಬಂದಿದ್ದಾರೆ ಎಂದರೆ ಏನರ್ಥ? ಎಂದು ಪ್ರಶ್ನಿಸಿದರು.

ವಾಗ್ವಾದದ ನಡುವೆ ಮಾತನಾಡಿದ ಬೈರತಿ ಸುರೇಶ್ ವ್ಯಾಪಾರ, ವಹಿವಾಟು ಮಾಡುವುದು ಯತ್ನಾಳ್‌ಗೆ ಅಗತ್ಯವಿರಬಹುದು. ನನಗೆ ಅದರ ಅಗತ್ಯವಿಲ್ಲ. ಸೌಜನ್ಯಕ್ಕಾದರೂ ಅಧಿಕಾರಿ ಭೇಟಿಯಾಗಿಲ್ಲ ಎಂದರೆ ಏನರ್ಥ? ನಿಮ್ಮ ಬಳಿ ವ್ಯಾಪಾರ ಮಾಡಲು ಆ ಅಧಿಕಾರಿ ಕಳುಹಿಸಬೇಕಿತ್ತೇ; ಎಂದು ಖಾರವಾಗಿ ಪ್ರಶ್ನಿಸಿದರು.

ಆಗ ಬಿಜೆಪಿಯ ಬಹುತೇಕ ಸದಸ್ಯರು ಎದ್ದು ನಿಂತು ಆಕ್ಷೇಪಿಸಿದರು. ಆ ಅಧಿಕಾರಿ ಕೆಎಂಎಎಸ್ ಕೇಡರ್‌ನವರು ಅದಕ್ಕೆ ಹಾಕಲಾಗಿದೆ. ಹಳಬರನ್ನೇ ಮುಂದುವರೆಸಿ ಎನ್ನುವುದರ ಬಗ್ಗೆ ಸಂಶಯವಿದೆ. ನೀವು ಏನೇ ಹೇಳಿದರೂ ಆ ಅಧಿಕಾರಿಯನ್ನು ವರ್ಗಾವಣೆ ಮಾಡಲು ಎಂದು ಪಟ್ಟು ಹಿಡಿದರು.

ಇದಕ್ಕೆ ಯತ್ನಾಳ್ ನಾನು ಭ್ರಷ್ಟರ ಪಕ್ಷದಲ್ಲಿ ಇರುವುದಿಲ್ಲ. ನನ್ನ ಹೇಳಿಕೆ ಬಗ್ಗೆ ಸಿಬಿಐ ತನಿಖೆ ಮಾಡಲಿ ಎಂದು ಹೇಳಿದರು.

ಬಸವರಾಜ ಬೊಮ್ಮಾಯಿ ಮಾತನಾಡಿ, ಅಧಿಕಾರವಿದೆ, ಹಾಕಲ್ಲ, ಮಾಡಲ್ಲ ಎಂದು ಸಚಿವರು ಹೇಳಿದರೆ ಹೇಗೆ? ಎಂದು ಏರಿದ ದನಿಯಲ್ಲಿ ಪ್ರಶ್ನಿಸಿದರು. ಇದರಿಂದ ಖಂಡಿತಾ ವ್ಯವಹಾರ ಮಾಡಿದ್ದಾರೆ ಎಂಬುದು ಸಾಬೀತಾಗಿದೆ. ನೋಡೇ ಬಿಡೋಣ ಯಾವ ಅಧಿಕಾರಿ ಬೇಕಾದರೂ ಹಾಕಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಗ್ರಾಮೀಣ ಜನರ ಪ್ರಗತಿಗೆ ಜ್ಞಾನ ವಿಕಾಸ ಸಹಕಾರಿ



ದೇವರಬೆಳಕೆರೆ ಕಾರ್ಯಕ್ರಮದಲ್ಲಿ ವಸಂತ್ ದೇವಾಡಿಗ

ಮಲೇಬೆನ್ನೂರು, ಜು.11- ದೇವರಬೆಳಕೆರೆ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ 'ಜ್ಞಾನ ದೀಪ' ಕೇಂದ್ರದ ವಾರ್ಷಿಕೋತ್ಸವವನ್ನು ಮಹಿಳೆಯರು ನಿನ್ನೆ ಸಂಭ್ರಮದಿಂದ ಆಚರಿಸಿದರು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮಾತನಾಡಿ, ಗ್ರಾಮೀಣ ಜನರ ಮತ್ತಷ್ಟು ಪ್ರಗತಿಗೆ ಜ್ಞಾನ ವಿಕಾಸ ಕಾರ್ಯಕ್ರಮದಡಿ ಅನೇಕ ಯೋಜನೆಗಳನ್ನು ಮಾತೃಶ್ರೀ ಹೇಮಾವತಿ ಅಮ್ಮನವರು ರೂಪಿಸಿದ್ದಾರೆ. ಮಹಿಳೆಯರ ಈ ಯೋಜನೆಗಳ ಸದುಪಯೋಗ ಪಡೆದುಕೊಳ್ಳುವಂತೆ ದೇವಾಡಿಗ ತಿಳಿಸಿದರು.

ತಾಲ್ಲೂಕು ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸವಿತಾ, ಕೆ.ಬೇವಿನಹಳ್ಳಿ ವಲಯದ ಮೇಲ್ವಿಚಾರಕ ಮಾರುತಿಗೌಡ, ಜ್ಞಾನ ವಿಕಾಸ ಕಾರ್ಯಕ್ಷೇತ್ರದ ಸಂಯೋಜಕಿ ಉಮಾ, ಒಕ್ಕೂಟದ ಅಧ್ಯಕ್ಷೆ ಕರಿಬಸಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

# ಖನ್ನೂರ ವಿದ್ಯಾನಿಕೇತನ ಶಾಲಾ ಸಂಸತ್‌ಗೆ ಆಯ್ಕೆ

ರಾಣೇಬೆನ್ನೂರು

ರಾಣೇಬೆನ್ನೂರು, ಜು.11- ಖನ್ನೂರ ವಿದ್ಯಾನಿಕೇತನ ಶಾಲೆಯಲ್ಲಿ ಶಾಲಾ ಸಂಸತ್ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಸತ್‌ಗೆ ಆಯ್ಕೆಯಾಗಿರುವ ಚಿ. ರಂಜಿತ ಶಾಸ್ತ್ರಿ, ಕು. ಹರ್ಷಿತಾ ಕೂನಬೇವು, ಗಗನದೀಪ ಆಡೂರ, ಕು. ಗಮ್ಯಾ, ಅಸಾದುಲ್ಲಾ ಚಿ. ನಿಹಾಲ್ ಶಿಗ್ಗಾಂವಿ, ಕು. ದೀಕ್ಷಾ ಹಾಗೂ ಕು. ಚಿರಾಗ ಜೀರಾವಾಲಾ, ಚಿ. ತರುಣ ಹಾಗೂ ಭಾವನಾ ಜೈನ್ ಅವರುಗಳಿಗೆ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಸಮೀರ ಫರ್ನಾಂಡೀಸ್ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಸ್ಥೆಯ ಅಧ್ಯಕ್ಷ ಎಂ. ಎಂ. ಖನ್ನೂರ ಮಾತನಾಡಿ, ನಾಯಕನು ಒಬ್ಬ ನಾವಿಕನಿದ್ದಂತೆ ನಾವಿಕನಿಲ್ಲದ ಹಡಗು ಹೇಗೆ ಚಲಿಸದೋ ಹಾಗೆಯೇ ನಾಯಕನಿಲ್ಲದೆ ಯಾವ ಕೆಲಸಗಳೂ ಸುವ್ಯವಸ್ಥಿವಾಗಿ ನಡೆಯಲಾರವು ಎಂದು ಮಕ್ಕಳಿಗೆ ಸೂಚ್ಯವಾಗಿ ತಿಳಿ ಹೇಳಿದರು.

ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಸುಲೋಚನ ಎಂ. ಖನ್ನೂರ, ಛೇರ್ಮನ್. ಡಾ. ಪ್ರವೀಣ ಎಂ.ಖನ್ನೂರ ಹಾಗೂ ಸಿಇಓ ಡಾ. ಶೈಲಶ್ರೀ ಪಿ. ಖನ್ನೂರ ಆಗಮಿಸಿದ್ದರು. ರೋಶ್ನಿ ಗುತ್ತಲ ಸ್ವಾಗತಿಸಿದರು. ಕು. ಉಜನೈಬ್ ನಿರೂಪಣೆ ಮಾಡಿದರು.

# ಬೆಂಗಳೂರು-ಮೈಸೂರು ಹೆದ್ದಾರಿ

## ಅವೈಜ್ಞಾನಿಕ ರಸ್ತೆಯಿಂದ 132 ಸಾವು: ಪರಮೇಶ್ವರ್

ಬೆಂಗಳೂರು, ಜು.11 - ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ಗೊಂದಲಗಳಿಂದ ಕೂಡಿದ್ದು, ಅಪಘಾತಗಳಿಗೆ ರಹದಾರಿ ಮಾಡಿಕೊಡುತ್ತಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಅಚ್ಚುಕಟ್ಟಾದ ರಸ್ತೆಯು ಜನರಿಗೆ ಅನುಕೂಲವಾಗುವ ಬದಲಾಗಿ ಸಾಕಷ್ಟು ನ್ಯೂನತೆಗಳಿಂದ ಕೂಡಿದೆ. ಒಂದು ರಾಷ್ಟ್ರೀಯ ಹೆದ್ದಾರಿಗೆ ಅನುಸರಿಸಬೇಕಾದ ಮಾನದಂಡಗಳನ್ನು ರಸ್ತೆ ನಿರ್ಮಿಸಿದ ಗುತ್ತಿಗೆದಾರರು ಮಾಡಿಲ್ಲ ಎಂದು ಕಿಡಿಕಾರಿದರು.

ಪ್ರಶ್ನೋತ್ತರ ವೇಳೆಯಲ್ಲಿ ಹಿರಿಯ ಸದಸ್ಯ ಎಸ್. ಸುರೇಶ್‌ಕುಮಾರ್, ಜಿ.ಟಿ.ದೇವೇಗೌಡ ಮತ್ತಿತರರು ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈ ಅವೈಜ್ಞಾನಿಕ ರಸ್ತೆ ನಿರ್ಮಾಣದಿಂದ ಇದುವರೆಗೂ 132 ಮಂದಿ ಪ್ರಾಣ ಕಳೆದುಕೊಂಡಿದ್ದು, ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ವಿವರಿಸಿದರು.

ರಸ್ತೆ ಉದ್ಘಾಟನೆಯಾದ ಮಾರ್ಚ್ ತಿಂಗಳಿನಲ್ಲಿ 19 ಮಾರಣಾಂತಿಕ, 42 ಮಾರಣಾಂತಿಕವಲ್ಲದ ಅಪಘಾತಗಳು ನಡೆದು 20 ಮಂದಿ ಮೃತಪಟ್ಟು, 63 ಮಂದಿ ಗಾಯಗೊಂಡಿದ್ದಾರೆ.

ಏಪ್ರಿಲ್‌ನಲ್ಲಿ 75 ಅಪಘಾತಗಳು ಆಗಿ, 23 ಜನ ಸತ್ತಿದ್ದು, 73 ಮಂದಿ ಗಾಯಗೊಂಡಿದ್ದಾರೆ. ಮೇ ತಿಂಗಳಲ್ಲಿ 94 ಅಪಘಾತಗಳಲ್ಲಿ 29 ಮಂದಿ ಪ್ರಾಣ ಕಳೆದುಕೊಂಡು 93 ಮಂದಿ ಗಾಯಗೊಂಡಿದ್ದು, ಕಳೆದ ತಿಂಗಳು ಜೂನ್‌ನಲ್ಲಿ 77 ಅಪಘಾತಗಳು ಆಗಿ 28 ಮಂದಿ ಸಾವನ್ನಪ್ಪಿ 96 ಮಂದಿ ಗಾಯಗೊಂಡಿದ್ದಾರೆ. ಇದುವರೆಗೂ 84 ಮಾರಣಾಂತಿಕ, 223 ಮಾರಣಾಂತಿಕವಲ್ಲದ ಅಪಘಾತಗಳು ಆಗಿವೆ ಎಂದು ವಿವರಿಸಿದರು.

ಚುನಾವಣೆಯ ವೇಳೆ ಬಂದೂಕುಗಳನ್ನು ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡುವುದು ಕಡ್ಡಾಯ. ಒಂದು ವೇಳೆ ಅನಿವಾರ್ಯವಾಗಿ ಬಂದೂಕುಗಳು ರೈತರ ಬಳಿಯೇ ಉಳಿಯಬೇಕು ಎಂಬುದಾದರೆ ಸಂಬಂಧಪಟ್ಟ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸುವಂತೆ ಅಶೋಕ್ ಕುಮಾರ್ ರೈ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಚುನಾವಣಾ ಆಯೋಗದ ನಿಯಮದ ಪ್ರಕಾರ ಶಾಂತಿ, ಸುವ್ಯವಸ್ಥೆ ಪಾಲನೆಗಾಗಿ ಬಂದೂಕುಗಳನ್ನು ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡಲಾಗುತ್ತದೆ. ಇದಕ್ಕಾಗಿ ಯಾವುದೇ ರೀತಿಯ ಶುಲ್ಕವಿಲ್ಲ. ಒಂದು ವೇಳೆ ಯಾರಾದರೂ ಶುಲ್ಕ ಪಡೆಯುವ ಮಾಹಿತಿ ಇದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು.

ಬೆಳೆಗಳ ರಕ್ಷಣೆಗಾಗಿ ಬಂದೂಕುಗಳು ಅನಿವಾರ್ಯ ಎಂಬ ಪರಿಸ್ಥಿತಿ ಇದ್ದರೆ, ಅಂತಹ ರೈತರು ವಿನಾಯಿತಿ ಸಮಿತಿಗಳ ಮುಂದೆ ಅರ್ಜಿ ಸಲ್ಲಿಸಿ ಬಂದೂಕುಗಳನ್ನು ತಮ್ಮ ಬಳಿಯೇ ಇರಿಸಿಕೊಳ್ಳಲು ಪೂರ್ವಾನುಮತಿ ಪಡೆಯಬಹುದೆಂದು ಸಲಹೆ ನೀಡಿದರು.

# ವಿಜ್ಞಾನ್ ಅಕಾಡೆಮಿಯಿಂದ ವ್ಯಕ್ತಿತ್ವ ವಿಕಸನ ಶಿಬಿರ




ದಾವಣಗೆರೆ, ಜು.11- ವಿಜ್ಞಾನ್ ಅಕಾಡೆಮಿ ವತಿಯಿಂದ ಈಚೆಗೆ ನಗರದಲ್ಲಿ ವ್ಯಕ್ತಿತ್ವ ವಿಕಸನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ, ಮಾನವ ಕಂಪ್ಯೂಟರ್, ಖ್ಯಾತಿಯ ಬಸವರಾಜ ಶಂಕರ ಉಮರಾಣಿ ಮಾತನಾಡಿ, ವಿಜ್ಞಾನ್ ಆಕಾಡೆಮಿಯು ಅತಿ ಕಡಿಮೆ ಅವಧಿಯಲ್ಲಿ ಉತ್ತಮ ಫಲಿತಾಂಶ ಹಾಗೂ ಶ್ರೇಷ್ಠ ಸಾಧನೆಯನ್ನು ಮಾಡುತ್ತಾ, ಶೈಕ್ಷಣಿಕ ಕ್ರಾಂತಿ ಮಾಡುತ್ತಿದೆ. ಪಿಯು ಹಾಗೂ ನೀಟ್ ಮೆಡಿಕಲ್ ವಿದ್ಯಾರ್ಥಿಗಳಿಗೆ ವಿಜ್ಞಾನ ಅಕಾಡೆಮಿ ಸಂಜೀವಿನಿಯಾಗಿದೆ ಎಂದು ಪ್ರಶಂಸೆ ವ್ಯಕ್ತಡಿಸಿದರು.

ವಿದ್ಯಾರ್ಥಿ ಜೀವನ ಬಂಗಾರದಂತೆ. ಹಾಗಾಗಿ ವಿದ್ಯಾರ್ಥಿಗಳು ಪರಿಶ್ರಮದ ಮೂಲಕ ಸುಂದರ ಭವಿಷ್ಯ ನಿರ್ಮಿಸಿಕೊಳ್ಳಬೇಕು. ಸಮಯ ಪ್ರಜ್ಞೆಯನ್ನು ಬೆಳೆಸಿ ಕೊಂಡು ಸಮಯವನ್ನು ಸದುಪಯೋಗ ಮಾಡಿಕೊಳ್ಳಿ. ಏಕೆಂದರೆ ಸಮಯ ಎಲ್ಲದಕ್ಕಿಂತಲೂ ಅಮೂಲ್ಯವಾದುದು, ಸಮಯವನ್ನು ನೀವು ಗೌರವಿಸಿದರೆ, ಅದು ನಿಮ್ಮನ್ನು ಗೌರವಿಸುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಶಿಸ್ತು ಬೆಳೆಸಿಕೊಳ್ಳಿ. ಶಿಕ್ಷಣಕ್ಕೆ ಆದ್ಯತೆ ನೀಡಿ, ಮೊಬೈಲ್‌ನಿಂದ ದೂರವಿದ್ದು, ಪುಸ್ತಕ ಪ್ರೇಮಿಗಳಾಗಿ, ನಿಮ್ಮ ಭವಿಷ್ಯ ನಿಮ್ಮ ಕೈಯ್ಯಲ್ಲಿದೆ. ಅದನ್ನು ಉಜ್ವಲವಾಗಿ ಮಾಡಿಕೊಳ್ಳಿ ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ವಿಜ್ಞಾನ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಸಂಜಯ್ ಗೌಡ, ಮುಖ್ಯಸ್ಥ ಜಿ.ಎಸ್. ಸತೀಶ್, ಭುವನೇಶ್ವರ್, ಎಂ. ಸಂತೋಷ್‌ಕುಮಾರ್ ಹಾಗೂ ಪ್ರಾಂಶುಪಾಲರಾದ ಪಿ. ಚಂದ್ರಶೇಖರ್ ಉಪಸ್ಥಿತರಿದ್ದರು.

# ಚಿಕನ್ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ಚಾಲನೆ



ದಾವಣಗೆರೆ, ಜು. 11 - ಮಹಾನಗರ ಪಾಲಿಕೆ, ಚಾರ್ಲಿ ಎಜುಕೇಷನ್ ಮತ್ತು ವೆಲ್ ಫೇರ್ ಫೌಂಡೇಷನ್ ಮತ್ತು ಜಿಲ್ಲಾ ಹಲಾಲ್ ಕೋಳಿ ಮಾರಾಟ ಅಂಗಡಿದಾರ ಸಂಘ ಹಾಗೂ ಇಟಾಚ್ವೆಂಚ ವತಿಯಿಂದ ಚಿಕನ್ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

ಪಾಲಿಕೆ ಆವರಣದಲ್ಲಿ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ಚಿಕನ್ ತ್ಯಾಜ್ಯ ಸಂಗ್ರಹಣಾ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕರು, ಸ್ಥಳೀಯ ಎಲ್ಲಾ ಚಿಕನ್ ತ್ಯಾಜ್ಯ ಸಂಗ್ರಹಣೆಯನ್ನು ವಾಹನದ ಮೂಲಕ ವಿಲೇವಾರಿ ಪಡಿಸಲು ಮಾರಾಟಗಾರರ ಸಂಘ ಮತ್ತು ಎನ್ ಜಿ ಓ ಮುಂದಾಗಿರುವುದು ಸ್ವಾಗತಾರ್ಹವಾಗಿದೆ ಎಂದು ತಿಳಿಸಿ, ಸಾರ್ವಜನಿಕರು ಸಹ ತ್ಯಾಜ್ಯ ಸಂಗ್ರಹಿಸುವವರ ಜೊತೆ ಸಹಕರಿಸಬೇಕೆಂದು ಕರೆ ನೀಡಿದರು.

ಮಹಾಪೌರರಾದ ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಮಹಾನಗರ ಪಾಲಿಕೆ ಸದಸ್ಯರಾದ ಸಯೀದ್ ಚಾರ್ಲಿ ಪೈಲ್ವಾನ್, ಜಾಕೀರ್ ಅಲಿ, ಉದಯಕುಮಾರ್, ಕೋಳಿ ಸಂಘದ ಮಾರಾಟಗಾರರ ಅಧ್ಯಕ್ಷ ಷಂಸು ತಬ್ರೇಜ್, ಕಾರ್ಯದರ್ಶಿ ನಿಸ್ಸಾ, ಗೌರವ ಅಧ್ಯಕ್ಷರಾದ ಇಬ್ರಾಹೀಂ ಕೋಳಿ, ವಸೀಂ ಚಾರ್ಲಿ ಮತ್ತಿತರರಿದ್ದರು.

# ಭಾರತ ವಿಕಾಸ ಪರಿಷದ್ ವತಿಯಿಂದ ಪರಿಸರ ದಿನಾಚರಣೆ



ದಾವಣಗೆರೆ, ಜು.11- ನಗರದ ಭಾರತ ವಿಕಾಸ ಪರಿಷದ್, ಗೌತಮ ಶಾಖೆ ಹಾಗೂ ಓಶೋ ಧ್ಯಾನ ಶಾಲಾ ಸಂಯುಕ್ತಾಶ್ರಯದಲ್ಲಿ ಕೊಂಡಜ್ಜಿಯ ಓಶೋ ಧ್ಯಾನ ಶಾಲಾ ಆವರಣದಲ್ಲಿ ವಿವಿಧ ಬಗೆಯ ಹಣ್ಣಿನ ಸಸಿಗಳು, ಹೂವಿನ ಸಸಿಗಳು, ನೆರಳಿನ ಸಸಿಗಳು, ಔಷಧೀಯ ಸಸಿಗಳು ಹಾಗೂ ಪ್ರಾಣಿ - ಪಕ್ಷಿಗಳಿಗೆ ಉಪಯುಕ್ತವಾಗುವ ಸುಮಾರು 62 ಸಸಿಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

'ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟಿ' ವಿಷಯವಾಗಿ ಚಿಂತನ – ಮಂಥನ ನಡೆಸಲಾಯಿತು. ಪರಿಸರ ವಿಕಾಸದ ಸಂಚಾಲಕ ಡಾ. ವಿವೇಕ್ ಜಿ ಭಿಡೆ ಮಾತನಾಡಿ, ಕಮ್ಮಿ ಸಮಯದಲ್ಲಿ ಅನ್ನ ಬೇಯಬೇಕೆಂದು ಪ್ರೆಷರ್ ಕುಕ್ಕರ್‌ನಲ್ಲಿ ಅನ್ನ ಮಾಡುತ್ತಿದ್ದೇವೆ. ಮಣ್ಣಿನ ಮಡಿಕೆಯಲ್ಲಿ ಆಹಾರ ತಯಾರಿ ಮಾಡುವುದನ್ನು ಬಿಟ್ಟಿದ್ದೇವೆ, ಇದರಿಂದ ಖನಿಜಾಂಶಗಳು ನಮ್ಮ ದೇಹಕ್ಕೆ ಸೇರುತ್ತಿಲ್ಲ, ಅನಿವಾರ್ಯತೆಯಿಂದ ಪ್ಲಾಸ್ಟಿಕ್ ಲೋಟಾ, ತಟ್ಟೆ, ಪ್ಲಾಸ್ಟಿಕ್ ಕವರ್‌ಗೆ ಮಾರು ಹೋಗಿದ್ದೇವೆ. ಇವುಗಳಿಂದ ಉತ್ಪತ್ತಿಯಾಗುವ ವಿಷ ಪದಾರ್ಥ ಬಳಸಿ ಆರೋಗ್ಯ ಹಾಗೂ ಪರಿಸರವನ್ನು ಹಾಳುಮಾಡಿಕೊಳ್ಳುತ್ತಿದ್ದೇವೆ. ನಮ್ಮ ಮನೆಯಿಂದಲೇ ಪ್ಲಾಸ್ಟಿಕ್ ನಿರ್ಮೂಲನೆ ಮಾಡುವಂತಹ ಕೆಲಸವಾಗಬೇಕು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಬಿವಿಪಿಯ ದಕ್ಷಿಣ ಕ್ಷೇತ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಕೆ. ತಿಪ್ಪೇಸ್ವಾಮಿ ಮಾತನಾಡಿ, ಸಂಸ್ಕಾರದಿಂದ ಎಲ್ಲಾ ಸಾಧ್ಯ. ಭಾರತ ವಿಕಾಸ ಪರಿಷದ್ ಈ ನಿಟ್ಟಿನಲ್ಲಿ ತನ್ನ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು.

ಯಾವುದೇ ಆಚರಣೆಗಳು ಕೇವಲ ಸಾಂಕೇತಿಕ ಆಚರಣೆಯಾಗದೆ ಅದನ್ನು ಅಳವಡಿಸಿಕೊಂಡು ರೂಢಿಸಿಕೊಂಡಾಗ ಮಾತ್ರ ಉದ್ದೇಶ ಈಡೇರುತ್ತದೆ, ಆದುದರಿಂದ ಪರಿಸರ ಸಂರಕ್ಷಣೆಯಲ್ಲಿ ಭಾರತ ವಿಕಾಸ ಪರಿಷದ್ ನ ಸದಸ್ಯರು ಇನ್ನು ಮುಂದೆ ಪ್ಲಾಸ್ಟಿಕ್ ತಟ್ಟೆ, ಲೋಟ ಬಳಸಬಾರದು.

ಅದರ ಬದಲಾಗಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಅಧ್ಯಕ್ಷತೆ ವಹಿಸಿದ್ದ ಗೌತಮ ಶಾಖೆ ಅಧ್ಯಕ್ಷ ಡಾ. ಪ್ರಸಾದ್ ಬಂಗೇರ ಕರೆ ನೀಡಿದರು.

ಪರಿಸರ ಕಾರ್ಯಕ್ರಮದಲ್ಲಿ, ಓಶೋ ಧ್ಯಾನ ಶಾಲೆಯ ಶಿವಕುಮಾರ್, ನಟರಾಜ್ ಗುಪ್ತ, ಕರಿಬಸಪ್ಪ, ಪೃಥ್ವಿರಾಜ್ ಹಾಗೂ ಭಾರತ ವಿಕಾಸ ಪರಿಷದ್ ನ ಶೀಲಾ ನಾಯಕ್, ಬಸವರಾಜ್ ಒಡೆಯರ್, ಮಧುಕರ್, ಹಿರೇಮಠ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀಮತಿ ಭವಾನಿ ಶಂಭುಲಿಂಗಪ್ಪ ಮತ್ತು ಶೀಲಾ ನಾಯಕ್ ವಂದೇ ಮಾತರಂ ಹಾಡಿದರು, ಪೃಥ್ವಿರಾಜ್ ವಂದಿಸಿದರು ಮತ್ತು ಪರಿಸರ ವಿಕಾಸದ ಸಹ ಸಂಚಾಲಕ ಸಿದ್ದೇಶ್ ಎಸ್. ಆರ್. ಕಾರ್ಯಕ್ರಮ ನಿರೂಪಿಸಿದರು.

# ಕರುಣಾ ಕಲ್ಯಾಣ ಟ್ರಸ್ಟ್‌ನಿಂದ ಬಡವರಿಗೆ ಸೈಕಲ್‌ಗಾಗಿ ಆರ್ಥಿಕ ನೆರವು

ದಾವಣಗೆರೆ,ಜು.11- ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ವತಿಯಿಂದ ಸೈಕಲ್ ಸವಾರಿ ಮಾಡಲು ಪ್ರೋತ್ಸಾಹಿಸಲಾಗುವುದು. ಕೆಲವು ದಶಕಗಳ ಹಿಂದೆ ಸೈಕಲ್ ಹಲವು ವಿಧಗಳಲ್ಲಿ ಜೀವನದ ಅವಿಭಾಜ್ಯ ಅಂಗವಾಗಿತ್ತು. ಈಗ ಅದು ಅಳಿವಿನಂಚಿಗೆ ಬಂದಿದೆ. ಪೆಟ್ರೋಲ್ ದರ ದುಬಾರಿ ರೂ.104 ಆಗಿ, ಬಡವರಿಗೆ ನಿಲುಕದ ವಸ್ತುವಾಗಿದೆ. ಅಲ್ಲದೆ ಪೆಟ್ರೋಲ್ ವಾಹನಗಳಲ್ಲಿ ದೈಹಿಕ ಶ್ರಮವಿಲ್ಲದೆ ಇರುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುತ್ತಿವೆ. ಪರಿಸರ ಮಾಲಿನ್ಯ ಕಡಿಮೆ ಮಾಡಲು ಹಾಗೂ ಸಾರ್ವಜನಿಕರ ಆರೋಗ್ಯ ದೃಷ್ಟಿ ಹಾಗೂ ಬಡವರ ಸಣ್ಣ ಆರ್ಥಿಕ ಉಳಿತಾಯಕ್ಕಾಗಿ ಬೆಂಬಲ ನೀಡಲು ಕರುಣಾ ಟ್ರಸ್ಟ್ ಸೈಕಲ್ ಕೊಡಿಸಲು ಬಯಸುತ್ತಿದೆ. ಬಡವರ ಆರ್ಥಿಕ ಪರಿಸ್ಥಿತಿಗೆ ಅನುಸಾರವಾಗಿ ಸೈಕಲ್ ಖರೀದಿಸಲು ಹಣಕಾಸಿನ ನೆರವು ನೀಡಲಾಗುವುದು.ಸಂಪರ್ಕಿಸಿ: 8310520002/ 9110455199. ಅಲ್ಲದೇ, ಈ ಕಾರ್ಯಕ್ರಮಕ್ಕೆ ಮನೆಯಲ್ಲಿ ಉಪಯೋಗಿಸದೇ ಇರುವ ಸೈಕಲ್ಲುಗಳನ್ನು ಟ್ರಸ್ಟಿಗೆ ನೀಡಿದರೆ ಅವುಗಳನ್ನು ರಿಪೇರಿ ಮಾಡಿಸಿ ಬಡವರಿಗೆ ನೀಡಲಾಗುವುದು ಎಂದು ಟ್ರಸ್ಟ್‌ನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.


ಜನ್ಮ ದಿನದ ಶುಭಾಶಯಗಳು




ಜಗಳೂರು ವಿಧಾನ ಸಭಾ ಕ್ಷೇತ್ರದ ಜನಪ್ರಿಯ, ಸರಳ, ಸಜ್ಜನಿಕೆ, ಕುಗ್ರಾಮಗಳಿಗೆ ರಸ್ತೆ ಭಾಗ್ಯ ನೀಡಿದ ರಸ್ತೆಗಳ ರಾಜ, ವಸತಿ ರಹಿತರಿಗೆ 15 ಸಾವಿರಕ್ಕೂ ಅಧಿಕ ಮನೆ ನೀಡಿದ ಬಡವರ ಬಂಧು, ಸಿರಿಗೆರೆ ಶ್ರೀಗಳ ಮಾರ್ಗದರ್ಶನದಲ್ಲಿ 57 ಕೆರೆಗಳಿಗೆ ನೀರು ಒದಗಿಸಲು ಕಾಯಕಲ್ಪ ನೀಡಿದ ರೂವಾರಿ, ಅಪ್ಪರ್ ಭದ್ರಾ ಯೋಜನೆಗೆ ಶ್ರಮಿಸಿದ ರೈತಾಪಿ ಒಡನಾಡಿ, 2013 ರಿಂದ 2018ರವರೆಗೆ ಜಗಳೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿ 3500 ಕೋಟಿಗೂ ಅಧಿಕ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿ ಮಾಡಿದ ಜನಪ್ರಿಯ ಸ್ವಾಭಿಮಾನಿ, ಅಭಿಮಾನಿ ಬಳಗದ ಮುಖಂಡರು, ಕೃಷಿ ಪದವೀಧರರಾದ

ಶ್ರೀ ಹೆಚ್.ಪಿ. ರಾಜೇಶ್

ಬಿ.ಎಸ್ಸಿ., (ಅಗ್ರಿ)

ಮಾಜಿ ಶಾಸಕರು, ಜಗಳೂರು ವಿಧಾನ ಸಭಾ ಕ್ಷೇತ್ರ,

ಅವರಿಗೆ 58ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು.

ಶುಭ ಕೋರುವವರು :

ಹೆಚ್.ಪಿ. ರಾಜೇಶ್ ಸ್ವಾಭಿಮಾನಿ ಅಭಿಮಾನಿ ಬಳಗ

ಜಗಳೂರು, ವಿಧಾನ ಸಭಾ ಕ್ಷೇತ್ರ


# ಹೆಚ್.ಸಿದ್ದವೀರಪ್ಪನವರ 117ನೇ ವರ್ಷದ ಜನ್ಮದಿನಕ್ಕೆ ನೆನವಿನ ಆಲಯದ ಬಿಳಿಲುಗಳು

ಭರತಖಂಡಂತರ್ಗತವಾದ ಕರ್ನಾಟಕ ಹಲವು ಸಂಗತಿಗಳನ್ನು ತನ್ನ ಮಡಿಲಿನಲ್ಲಿಟ್ಟು ಕೊಂಡು, ಕೌಶಲ್ಯತೆಯನ್ನು ರೂಢಿಸಿಕೊಂಡು, ಪ್ರಾಮಾಣಿಕತೆಯ ಪಾಥೆಯನ್ನೊಳಗೊಂಡು 'ಮಹಾತ್ಮೆ'ಯನ್ನು ಕಂಡುಕೊಂಡು ನಾವೀನ್ಯತೆಯ ಚೈತನ್ಯವನ್ನು ಬಿತ್ತರಿಸುತ್ತಾ, ಸಮನ್ವತೆಯನ್ನು ಸಾದರಪಡಿಸುತ್ತಾ ಬೆಳೆದಿರುವುದು ಐತಿಹಾಸಿಕ ಸತ್ಯ. ಇಂತಹ ಇತಿಹಾಸದ ಸತ್ಯಾಸತ್ಯದ ನಡುವೆ ಸಮಶ್ರಮದ ಗುಣವಂತರಾದಾಗ ನಿಜ ಸ್ವಾತಂತ್ರ್ಯ ಸಾಧ್ಯವೆಂದು ರಾಷ್ಟ್ರದ ಧೀಮಂತರ ಒಕ್ಕೊರಲಿನ ನಗಾರಿ-ನೌಭತ್ತು ಬಾಲಕನಿದ್ದಾಗಲೇ ಹೆಚ್. ಸಿದ್ದವೀರಪ್ಪನವರಿಗೆ ಆವೃತ್ತವಾಯಿತು. ಇದರ ಪ್ರತಿಫಲವೇ ಮುಂದೆ ದೇಶದ ಪ್ರಥಮ ಮಹಾಚುನಾವಣೆಯಲ್ಲಿ ಹರಿಹರ ಕ್ಷೇತ್ರದಿಂದ ಸ್ಪರ್ಧಿಸಲು ಹಾಗೂ ಪ್ರಜಾಸತ್ತಾತ್ಮಕ ಆಡಳಿತದ ಕನಸು ನನಸಾಗಲು ಸಾಧ್ಯವಾಯಿತು.

ಶ್ರೀಯುತರ ವಿದ್ಯಾಭ್ಯಾಸ ಹುಟ್ಟೂರು ಹನಗವಾಡಿಯಲ್ಲಿ ಪ್ರಾರಂಭವಾಯಿತು. ಬಡತನದ ನೊಗ ಹೊತ್ತ ಕುಟುಂಬಕ್ಕೆ ಮುಂದೆ ದಿಕ್ಕು ಕಾಣದಿದ್ದಾಗ ಹತ್ತಿರದ ಸಂಬಂಧಿಗಳಾದ ದೊಡ್ಡಬಾತಿಯ ದಿವಂಗತ ಕೆ.ಜಿ. ಚಂದ್ರಪ್ಪನವರ ತಾಯಿ ಮತ್ತು ತಂದೆ (ಕನ್ನಪ್ಪ ಸಿದ್ದಪ್ಪ-ಕೆಂಚಮ್ಮ) ಸಹಾಯದಿಂದ ಬಾತಿಯಿಂದಲೇ ದಾವಣಗೆರೆಗೆ ನಡೆದುಕೊಂಡು ಹೋಗಿ ಲೋಯರ್ ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ವಿದ್ಯಾಭ್ಯಾಸವನ್ನು ಮುಗಿಸಿದರು. ಮತ್ತೆ ಮುಂದೆ ಓದಲು ಅದೇ ಕತ್ತಲೆಯ ಗತಿ ಬಂದಿದ್ದರಿಂದ ಬಾತಿಯ ಬಂಧುಗಳೇ ಕೈ ಹಿಡಿದು ಮೈಸೂರು ಮಹಾರಾಜ ಕಾಲೇಜಿಗೆ ಓದಲು ಕಳುಹಿಸಿದರು. ಮಹಾರಾಜ ಕಾಲೇಜಿನಲ್ಲಿ ಪ್ರಸಿದ್ಧ ಪ್ರಾಧ್ಯಾಪಕರಾದ ಜೆ.ಸಿ. ರೋಲೋ, ಆಲ್ಬರ್ಟ್ ಮ್ಯಾಕಿಂನ್‌ಟೋಶ್, ಡಾ|| ಎಸ್. ರಾಧಾಕೃಷ್ಣನ್, ರಾಧಾಕುಮಾರ್ ಮುಖರ್ಜಿ, ಪಂಡಿತ್ ವರದಾಚಾರ್ಯ, ಪ್ರೊ|| ವಾಡಿಯಾ, ಬಿ.ಎಂ.ಶ್ರೀ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಮುಂತಾದ ಅಗಾಧ ಜ್ಞಾನಧಾತ್ರಿಯ ಮೇರು ಪರ್ವತದ ಪ್ರಾಧ್ಯಾಪಕರು ಪ್ರಭಾಷಣಕಾರರಾಗಿದ್ದರು. ಅಂದಿನ ಕಾಲದಲ್ಲಿ ಮೈಸೂರಿಗೆ ಓದಲು ಹೋಗುವುದೆಂದರೆ ಸಾಮಾನ್ಯ ಸಂಗತಿಯಾಗಿರಲಿಲ್ಲ. ಅಲ್ಲಿಯೇ ಶ್ರೀಯುತರಿಗೆ ರಾಜಕೀಯ ಸೆಳೆತ ಪ್ರಾರಂಭವಾಯಿತು. ಪದವಿ ತರಗತಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ನಂತರ ಮುಂದಿನ ಓದಿಗೆ ಕಗ್ಗಂಟಾಯಿತು. ಈ ಸಂಕಟವನ್ನು ಬಗೆಹರಿಸಲು ಸರ್ಕಾರಿ ನೌಕರಿಗೆ ಸೇರಲು ತೊಳಲುತ್ತಿದ್ದಾಗ ಇದೇ ಬಂಧುಗಳು ಪುನಃ ಪೂನಾದ ಫರ್ಗ್ಯುಷನ್ ಕಾಲೇಜಿನಲ್ಲಿ ಲಾ ಓದಲು ಸಹಕರಿಸಿದ ಪರಿಣಾಮವಾಗಿ ಅದೇ ಮನೆಯ ಕನ್ಯೆಯನ್ನು ವಿವಾಹವಾಗಿ ಅಳಿಯಂದಿರಾದರು.

ಪೂನಾದ ಕಾನೂನು ಪರೀಕ್ಷೆ ಬರೆದು ಊರಿಗೆ ಮರಳಿದರು. ಕೆಲ ದಿನಗಳಲ್ಲಿಯೇ ಕಾನೂನು ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದ ಸಂತೋಷದಲ್ಲಿಯೇ ಗಡಿಯಾರ ಕಂಬದ ಬಳಿ ಕಟ್ಟಡವೊಂದನ್ನು ಬಾಡಿಗೆ ಪಡೆದು ಹೆಚ್. ಸಿದ್ದವೀರಪ್ಪ, ಬಿ.ಎ., ಎಲ್.ಎಲ್.ಬಿ. ಅಡ್ವೋಕೇಟ್ ಎಂದು ಬೋರ್ಡ್ ಹಾಕಿದರು.

ಬಹುಮುಖ್ಯವಾಗಿ ಗಾಂಧಿ ಮತ್ತು ಡಾ. ಬಿ. ಆರ್. ಅಂಬೇಡ್ಕರ್‌ರವರ ವಿಶೇಷ ಪ್ರಭಾವದ ಸೆಳೆತಕ್ಕೊಳಗಾದರು. ಬಿ.ಆರ್. ಅಂಬೇಡ್ಕರ್‌ರವರು ಕಾಲೇಜಿಗೆ ಆಗಮಿಸಿ ವಿಶೇಷ ಉಪನ್ಯಾಸ ನೀಡುತ್ತಿದ್ದುದು, ವಿದ್ಯಾರ್ಥಿಗಳಾದ ನಾವುಗಳು ಚರ್ಚೆಯಲ್ಲಿ ಭಾಗವಹಿಸುತ್ತಿದ್ದುದು ಆತ್ಮವಿಶ್ವಾಸಕ್ಕೆ ಬುನಾದಿಯಾಯಿತು.



ಐತಿಹಾಸಿಕ ಪ್ರಸಿದ್ಧ ಚಿತ್ರದುರ್ಗ ಜಿಲ್ಲೆಗೆ ಸೇರಿದ ದಾವಣಗೆರೆ 2ನೇ ಸ್ಥಾನದಲ್ಲಿದ್ದರೂ ಒಟ್ಟು ವಹಿವಾಟಿನಲ್ಲಿ ಮೊದಲ ಸ್ಥಾನದಲ್ಲಿದ್ದು, ದುಡಿಯುವ ವರ್ಗದ ಕೇಂದ್ರವಾದುದ್ದಕ್ಕೆ ಇಲ್ಲಿಯೇ 'ವಕೀಲಿ' ವೃತ್ತಿಗೆ ತಕ್ಕ ಸ್ಥಳವೆಂದು ಶ್ರೀಯುತರು ಗುರುತಿಸಿಕೊಂಡರು. ವೃತ್ತಿಗೆ ಬೇಕಾಗಿದ್ದ ಮಾತಿನ ಬಂಡವಾಳ ಇದ್ದುದರಿಂದ ಕಕ್ಷಿದಾರರಿಂದ 'ನಮ್ ಲಾಯರ್ ಸಿದ್ದೀರಪ್ಪನೋರು' ಎಂದು ಹೆಮ್ಮೆಯಿಂದ ಪ್ರಶಂಸೆಗೊಳಗಾದರು. ಸಿವಿಲ್ ವ್ಯಾಜ್ಯಗಳಿಗಿಂತ ಕ್ರಿಮಿನಲ್ ವ್ಯಾಜ್ಯಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರಿಂದ 'ಕ್ರಿಮಿನಲ್ ಲಾಯರ್' ಎಂದೇ ಹೆಗ್ಗಳಿಕೆ ಗಳಿಸಿದರು.

ಸಿದ್ದವೀರಪ್ಪನವರು ಅಲ್ಪಕಾಲದಲ್ಲಿಯೇ ಜನಪ್ರಿಯ ವಕೀಲರಾದರು. ರೈತರಲ್ಲಿ ಬದುಕಿನ ದೃಢತ್ವ ತುಂಬಲು ರೈತರ ಫಸಲುಗಳ ಮಾರಾಟದ ಸಹಕಾರ ಸಂಘ ಸ್ಥಾಪಿಸಿ ಚಿತ್ರದುರ್ಗ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಸೋಲನ್ನನುಭವಿಸಿದರೂ ರೈತರ ಸಮಸ್ಯೆಗಳತ್ತ ಗಮನ ಹರಿಸಿದ ಪ್ರಯುಕ್ತ ಮತ್ತೆ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಗೆಲುವನ್ನು ಹೊಂದಿದರು. ಈ ಸಂದರ್ಭದಲ್ಲಿಯೇ ಕೊಡಗನೂರು ಪ್ರೌಢಶಾಲೆ, ಆನೆಕೊಂಡದ ಚನ್ನಬಸಪ್ಪನವರಿಂದ ಉದ್ಘಾಟನೆಯಾಯಿತು. ವಕೀಲಿ ವೃತ್ತಿ ನಡುವೆಯೇ ಶಿಕ್ಷಣ, ಸಾಮಾಜಿಕ ಚಟುವಟಿಕೆ, ರೈತರ ಪರ ಹೋರಾಟ ಇವುಗಳ ಪರಿಣಾಮದಿಂದ ರಾಜ್ಯ ರಾಜಕೀಯಕ್ಕೆ ಹೆಜ್ಜೆ ಇಟ್ಟರು. ದಾವಣಗೆರೆಯಿಂದ ಸ್ಪರ್ಧೆ ಬೇಡವೆಂದು ತೀರ್ಮಾನಿಸಿ ಹರಿಹರ ಕ್ಷೇತ್ರದಿಂದಲೇ ಸ್ಪರ್ಧಿಸಿದರು. ಮೈಸೂರು ಪ್ರಜಾಪ್ರತಿನಿಧಿ ಸಭೆ, ರಾಜ್ಯಾಂಗ ರಚನಾ ಸಭೆ, ಬಿ.ಆರ್. ಅಂಬೇಡ್ಕರ್ ನೇತೃತ್ವದಲ್ಲಿ ಭಾರತ ಸಂವಿಧಾನ ರಚನೆಯ ಕರಡು ಸಮಿತಿ ಸದಸ್ಯರಾಗಿದ್ದುದು ಹೆಮ್ಮೆಯ ವಿಷಯ.

ರುಚಿಯ ನಿಜವಾದ ಮೂಲ ನಾಲಿಗೆಯಲ್ಲಿಲ್ಲ; ಮನಸ್ಸಿನಲ್ಲಿದೆ ಎಂಬ ಸಿದ್ಧಾಂತದ ತಳಹದಿಯ ಮೇಲೆ ನಿಂತು 1952 ರ ಸಂವಿಧಾನಾತ್ಮಕ ಪ್ರಥಮ ಮಹಾ ಚುನಾವಣೆಯಲ್ಲಿ ಹರಿಹರ ಕ್ಷೇತ್ರದಿಂದ ವಿಧಾನಸಭಾ ಶಾಸಕರಾಗಿ ಕೆಂಗಲ್ ಹನುಮಂತಯ್ಯನವರ ಸಚಿವ ಸಂಪುಟದಲ್ಲಿ ಗೃಹ, ತೋಟಗಾರಿಕೆ, ಸಾರಿಗೆ ಇಲಾಖೆ, ಕೈಗಾರಿಕೆ ಖಾತೆಗಳನ್ನು ಇವರು ಅಲಂಕರಿಸಿದರು. 1953 ರಲ್ಲಿ ರೋಮ್ ನಗರದಲ್ಲಿ ನಡೆದ ಎಫ್.ಎ.ಓ. ಸಮಾವೇಶದಲ್ಲಿ ಭಾರತದ ಪರವಾಗಿ ಭಾಗವಹಿಸಿ, ಯುರೋಪಿನ ಕೈಗಾರಿಕೆಗಳ ಬಗ್ಗೆ ವಿಶೇಷ ಆಸಕ್ತಿಯನ್ನು ಪಡೆದರು.

ಗಮನಾರ್ಹ ವಿಷಯವೇನೆಂದರೆ ಡಾ|| ಬಾಬು ರಾಜೇಂದ್ರ ಪ್ರಸಾದ್, ಜವಾಹರ್‌ಲಾಲ್ ನೆಹರು, ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್, ಸರ್. ಎಂ. ವಿಶ್ವೇಶ್ವರಯ್ಯನವರ ಜೊತೆಯಲ್ಲಿ ಆಪ್ತರಾಗಿದ್ದರು.

ಮೈಸೂರಿನ ಮಹಾ ಚುನಾವಣೆಯಲ್ಲಿ ಜಯ ಗಳಿಸಿ ಪ್ರಥಮ ವಿಧಾನಸಭೆಯ ಸಚಿವರಾದಾಗ ಕೆಂಗಲ್ ಹನುಮಂತಯ್ಯನವರು ಗೃಹ ಸಚಿವರಾದ ಹೆಚ್. ಸಿದ್ದವೀರಪ್ಪನವರ ಹೆಗಲ ಮೇಲೆ ಕೈಯನ್ನು ಹಾಕಿದಾಗಅಲಕ್ಕನೇನಿಂತು'ಹನುಮಂತಯ್ಯನವರೇ ಮೊದಲು ನನ್ನ ಹೆಗಲ ಮೇಲಿರುವ ನಿಮ್ಮ ಕೈಯನ್ನು

## An Intagible Politician

ತೆಗೆಯಿರಿ. ನನ್ನ ಹೆಗಲಿನ ಮೇಲೆ ಕೈ ಹಾಕಿದವರು ಲಾ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ಡಾ|| ಬಿ.ಆರ್. ಅಂಬೇಡ್ಕರ್‌ರವರು ಅಂದಿನಿಂದಲೇ ತೀರ್ಮಾನಿಸಿದ್ದು, ಈ ಹೆಗಲು ಕೇವಲ ಅವರಿಗೆ ಮಾತ್ರ ಮೀಸಲು' ಎಂದರು. ಆಗ ಹನುಮಂತಯ್ಯನವರು ಕ್ಷಮೆಯಾಚಿಸಿದ್ದುದು, ಶ್ರೀಯುತರು ಗೃಹ ಸಚಿವರಾದಾಗ ಪೊಲೀಸ್ ಐ.ಜಿ.ಪಿ. ಬಾಬುರೆಡ್ಡಿ ಪ್ರಕರಣ ಮತ್ತು ಶಿವಮೊಗ್ಗದ ಜಿಲ್ಲಾಧಿಕಾರಿಯನ್ನು ತೆಪ್ಪಗಾಗಿಸಿದ್ದು, ನಿಜಕ್ಕೂ ಈ ಪ್ರಸಂಗಗಳು ಅತ್ಯಂತ ಆತ್ಯಾಂತಿಕ.

ತದನಂತರ ಶ್ರೀಯುತರ ರಾಜಕೀಯ ಕ್ಷೇತ್ರದಲ್ಲಿ 10 ವರ್ಷ ಕಾಂಗ್ರೆಸ್ ಟಿಕೆಟ್‌ನಿಂದ ವಂಚಿತರಾದರು. ರಾಜಕೀಯದಿಂದ ಸನ್ಯಾಸವನ್ನೇನೂ ಸ್ವೀಕರಿಸದೇ ಕಾಂಗ್ರೆಸ್ ಪಕ್ಷ ತ್ಯಜಿಸಿ 'ಜನತಾ ಪಕ್ಷ' ಎಂಬ ಪ್ರಾದೇಶಿಕ ಪಕ್ಷವನ್ನು ಅಸ್ತಿತ್ವಕ್ಕೆ ತಂದು 1967 ರಲ್ಲಿ 'ಮೈಸೂರು ರಾಜ್ಯ ವಿಧಾನಸಭೆ' ಚುನಾವಣೆಯಲ್ಲಿ ಗೆದ್ದು ವಿರೋಧ ಪಕ್ಷದ ನಾಯಕ ಸ್ಥಾನದೊಂದಿಗೆ, ಆಡಳಿತಾರೂಢ ಸರ್ಕಾರವನ್ನು ಪತನಗೊಳಿಸಿ, 1972 ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಜಯಗಳಿಸಿಕೊಂಡು, ಮುಖ್ಯಮಂತ್ರಿ ಸ್ಥಾನ ದೊರೆಯದಿದ್ದರೂ ದೇವರಾಜ ಅರಸು ಮಂತ್ರಿ ಮಂಡಲದಲ್ಲಿ ಆರೋಗ್ಯ ಮತ್ತು ಕಾನೂನು ಸಚಿವರಾಗಿ ಪ್ರಖ್ಯಾತರಾದರು. ಇದೇ ಸಂದರ್ಭದಲ್ಲಿ ಕಕ್ಕರಗೊಳ್ಳದ ಪಟೇಲ್ ವೀರಪ್ಪನವರ ನಿಯೋಗದ ಮನವಿಯಂತೆ ಪ್ರೌಢಶಾಲೆ ಪ್ರಾರಂಭಿಸಿ, ದೇವರಬೆಳಕೆರೆ ಪಿಕ್‌ಅಪ್ ಡ್ಯಾಂ, ಕುಕ್ಕುವಾಡದಲ್ಲಿ ಸಕ್ಕರೆ ಕಾರ್ಖಾನೆ ಮುಂತಾದವುಗಳನ್ನು ಧೀರೋದಾತ್ತರಾಗಿ ಕಾರ್ಯಗೊಳಿಸಿದ್ದು ಬುದ್ಬುದಾದ್ಭುತ.

ಹೆಚ್. ಸಿದ್ದವೀರಪ್ಪನವರು ಜೀವನ ವಿಧಾನದಲ್ಲಿ ಕಿರಿದರಲ್ಲಿ ಹಿರಿದ(Multum in parvo)ನ್ನು ತೋರುವ, ಅನ್ಯಾಯಕ್ಕೆ ತಲೆಭಾಗದೇ, ಹಿಡಿದ ಕೆಲಸವನ್ನು ಸಾಧಿಸುವ ಛಲಗಾರರಾಗಿದ್ದು, ಬಡಾಯಿ ಮಾತು (Grandiloquent) ಗಳನ್ನಾಡದೇ ಕಷ್ಟದಲ್ಲಿರುವವರನ್ನು, ದುಃಖಿತರನ್ನು ಕಂಡರೆ ಮಮ್ಮಲ ಮರಗುವ ಕರುಣಾರ್ಧಮಯರಾಗಿ, ನಾಲ್ಕಕ್ಷರದ ಅಶ್ಲೀಲ ಮಾತುಗಳನ್ನು (fourelet-ter bad speech) ನುಡಿಯದೇ, ಜನರಲ್ಲಿ ತೋರುತ್ತಿದ್ದ ನಿರ್ವಾಜ ಪ್ರೇಮ ದಳಹೀನ (Apet-alous) ವಾಗದೇ, ನಿಷ್ಕಳಂಕ (Blemistless) ಹೃದಯಸ್ಪರ್ಷಿಯಾಗಿ, ರಾಜಕೀಯ ಅರ್ಥಶಾಸ್ತ್ರಜ್ಞ (Chremotist) ರಾಗಿ, ತೊಡರು-ತೊಡಕುಗಳನ್ನು ತೊಡವಾಗಿ ಧರಿಸಿ, ಸರಳ-ಸುಂದರ-ಹಂದರದ ಮೇಲೆ ಬದುಕನ್ನು ಕಟ್ಟಿಸಿದ ತಂದೆ-ತಾಯಿ (ಗುರುಸಿದ್ದಪ್ಪ-ಸಿದ್ದಮ್ಮ)ಯವರ ಪಡಿನೆಳಲಿನಲ್ಲಿ ನುಡಿಗಡಣಗಳನ್ನಾಡಿದ ಶ್ರೀಯುತರು ದಿನಾಂಕ: 12-07-1906 ರಲ್ಲಿ ಜಾತ್ಯರಾಗಿ ದಿನಾಂಕ: 28-04-1981 ರಲ್ಲಿ ವಿಶೇಷ ವಿಶ್ರಾಂತಿ ತಾಣಾಂಕೃತರಾದವರ 117ನೇ ಜನ್ಮ ವರ್ಷದ ಪ್ರತಿಬಿಂಬದಂತಿರುವ ನೆನಹಿನ ಮಾಲೆ.



- ಪ್ರೊ|| ಬಾತಿ ಬಸವರಾಜ್
ಶೈಕ್ಷಣಿಕ ಸಲಹೆಗಾರರು,
ದವನ ಕಾಲೇಜು,
ದಾವಣಗೆರೆ.
88845 27130

## ವೈಜ್ಞಾನಿಕ ತನಿಖೆಯಲ್ಲಿ ಕಾಣದ ಪ್ರಗತಿ

**(1ನೇ ಪುಟದಿಂದ)** ವಿಜ್ಞಾನ ಅಗತ್ಯವಾಗಿದೆ. ನಕಲಿ ದಾಖಲಾತಿಗಳನ್ನು ಗುರುತಿಸಲು ವಿಧಿ ವಿಜ್ಞಾನ ನೆರವಾಗುತ್ತದೆ ಎಂದರು.

ಕಾನೂನು ಕಾಲೇಜಿನ ಪ್ರಾಂಶುಪಾಲ ಜಿ.ಎಸ್. ಯತೀಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ದಾವಣಗೆರೆ ವಿ.ವಿ. ವಿಧಿ ವಿಜ್ಞಾನ ವಿಭಾಗದ ಬೋಧಕ ಪ್ರೊ. ನಟರಾಜ್ ಉಪಸ್ಥಿತರಿದ್ದರು.

### ಬೇಕಿದೆ ಅಪರಾಧ ದೃಶ್ಯ ಕಾಯ್ದೆ

**ಭಾರತದಲ್ಲಿ ಅಪರಾಧ ಸ್ಥಳದಲ್ಲಿ ಪೊಲೀಸರಿಗಿಂತ ಮೊದಲೇ ಜನರು ಹೋಗಿರುತ್ತಾರೆ. ವಿಧಿ ವಿಜ್ಞಾನ ಪುರಾವೆಗಳಲ್ಲಿ ಮಧ್ಯ ಪ್ರವೇಶ ಮಾಡಿರುತ್ತಾರೆ. ಇದು ಪ್ರಕರಣಗಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ಪ್ರೊ. ದಿನೇಶ್ ರಾವ್ ಹೇಳಿದರು. ಬೇರೆ ದೇಶಗಳಲ್ಲಿ ಅಪರಾಧ ದೃಶ್ಯ ಕಾಯ್ದೆಗಳು ಜಾರಿಯಲ್ಲಿವೆ.**

**ಅಪರಾಧ ನಡೆದ ಜಾಗಕ್ಕೆ ಸಾರ್ವಜನಿಕರು ತೆರಳಿ ವಿಧಿ ವಿಜ್ಞಾನ ಪುರಾವೆಗಳಿಗೆ ಧಕ್ಕೆ ತಂದರೆ ಶಿಕ್ಷೆಯಾಗುತ್ತದೆ. ಈ ಮಾದರಿಯಲ್ಲಿ ಭಾರತದಲ್ಲೂ ಕಾಯ್ದೆ ರೂಪಿಸುವ ಅಗತ್ಯವಿದೆ ಎಂದವರು ತಿಳಿಸಿದರು.**

## ಭಾರತದಲ್ಲಿ ಚಿಪ್ ಉತ್ಪಾದನೆಗೆ ಅರ್ಜಿ

**(1ನೇ ಪುಟದಿಂದ)** ಉತ್ಪಾದನೆಗಾಗಿ ವೇದಾಂತ ಜೊತೆ ಮಾಡಿಕೊಂಡಿದ್ದ ಜಂಟಿ ಉದ್ಯಮವನ್ನು ಫಾಕ್ಸ್‌ಕಾನ್ ನಿನ್ನೆ ರದ್ದುಗೊಳಿಸಿತ್ತು.

ಭಾರತದಲ್ಲಿ ಸೆಮಿಕಂಡಕ್ಟರ್ ಹಾಗೂ ಡಿಸ್‌ಪ್ಲೇ ಫ್ಯಾಬ್‌ಗಳ ಉತ್ಪಾದನೆಗಾಗಿ ಸಹಭಾಗಿಯ ಪರಿಶೀಲನೆಯಲ್ಲಿದ್ದೇವೆ. ಭಾರತದಲ್ಲಿ ಮುಂದಿನ ಹಂತದ ಹಾಗೂ ಜಾಗತಿಕ ದರ್ಜೆಯ ಪೂರೈಕೆ ಹಾಗೂ ಉತ್ಪಾದನಾ ದಕ್ಷತೆ ಹೊಂದಲು ಬಯಸಿದ್ದೇವೆ ಎಂದು ಕಂಪನಿ ಹೇಳಿದೆ.

ಸೆಮಿಕಂಡಕ್ಟರ್ ಹಾಗೂ ಡಿಸ್‌ಪ್ಲೇ ಫ್ಯಾಬ್ ವ್ಯವಸ್ಥೆಗಾಗಿ ಅರ್ಜಿ ಸಲ್ಲಿಸುವ ಸಿದ್ಧತೆಯಲ್ಲಿದ್ದೇವೆ ಎಂದೂ ಕಂಪನಿ ಹೇಳಿದೆ.

ವೇದಾಂತ ಹಾಗೂ ನಾವು ಬೇರೆ ದಾರಿ ಹಿಡಿಯಲು ಪರಸ್ಪರ ಸಮ್ಮತಿಸಿದ್ದೇವೆ. ಇದು ನಕಾರಾತ್ಮಕವಲ್ಲ. ಯೋಜನೆ ಸಾಕಷ್ಟು ವೇಗವಾಗಿ ಸಾಗುತ್ತಿಲ್ಲ ಎಂಬುದನ್ನು ಉಭಯರೂ ಗಮನಿಸಿದ್ದೇವೆ. ಹೊರಗಿನ ವಿಷಯಗಳ ಕಾರಣದಿಂದ ಸುಗಮವಾಗಿ ಸಾಗಲು ಆಗುತ್ತಿಲ್ಲ ಎಂದು ಫಾಕ್ಸ್‌ಕಾನ್ ತಿಳಿಸಿದೆ.

## ಕೃಷಿ ಕಾಯ್ದೆ ಶೀಘ್ರ ವಾಪಸ್ಸಾತಿಗೆ ಆಗ್ರಹ




**(1ನೇ ಪುಟದಿಂದ)** ಬೆಲೆ ನಿರ್ಧರಿಸುವ ಕಾರ್ಯ ಆಗಬೇಕು ಎಂದು ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಇದೇ ಸಂದರ್ಭದಲ್ಲಿ ಆಗ್ರಹಿಸಿದರು.

ಇದೇ ಜು. 19ರಂದು ಶಿವಮೊಗ್ಗದಲ್ಲಿ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ, ರಾಜಕೀಯ ಧುರೀಣ ದಿ. ಹೆಚ್.ಎಸ್. ರುದ್ರಪ್ಪನವರ ಸಂಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಅಂದು ಬೆಳಿಗ್ಗೆ 10.30ಕ್ಕೆ ಶಿವಮೊಗ್ಗ ಪ್ರವಾಸಿ ಮಂದಿರದಿಂದ ನಗರದಲ್ಲಿ ಭಾವಚಿತ್ರ ಮೆರವಣಿಗೆ ನಡೆಯಲಿದೆ. ಬಳಿಕ ರುದ್ರಪ್ಪನವರ ಸಮಾಧಿ ಸ್ಥಳದಲ್ಲಿ ಸಂಸ್ಮರಣಾ ಕಾರ್ಯಕ್ರಮ ನಡೆಯಲಿದೆ. ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯ ವಹಿಸಲಿದ್ದು, ವಿವಿಧ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ನೌಕರರ ಹೋರಾಟ ಹಿಂಪಡೆಯಲು ಹಣ ಪಡೆದಿದ್ದಾರೆಂದು ಸುದ್ದಿ ಮಾಡಿ ತಮ್ಮ ತೇಜೋವಧೆ ಮಾಡಿದ ಖಾಸಗಿ ಟಿವಿವಾಹಿನಿಯೊಂದರ ವಿರುದ್ಧ ಬೆಂಗಳೂರಿನ ಅಡಿಶನ್ ಚೀಫ್ ಮ್ಯಾಜಿಸ್ಟ್ರೇಟರ ಕೋರ್ಟ್‌ನಲ್ಲಿ ದೂರು ದಾಖಲಿಸಲಾಗಿತ್ತು. ನ್ಯಾಯಾಲಯ ಜು. 7ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಟಿವಿ ವಾಹಿನಿಯವರಿಗೆ ಸಮನ್ಸ್ ಜಾರಿ ಮಾಡಿದೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷೆ ಮಹಾದೇವಿ ಬೇನಾಳಮಠ, ಸಂಘಟನಾ ಕಾರ್ಯದರ್ಶಿ ಚನ್ನಬಸಪ್ಪ ಮಲ್ಲಶೆಟ್ಟಿಹಳ್ಳಿ, ರೈತ ಸಂಘದ ಜಿಲ್ಲಾಧ್ಯಕ್ಷ ಶತಕೋಟಿ ಬಸಣ್ಣ, ಜಿಲ್ಲಾ ಕಾರ್ಯಾಧ್ಯಕ್ಷ ಶೇಖರನಾಯ್ಕ ಚಿನ್ನಸಮುದ್ರ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಎಫ್‌ಎಟಿಎಫ್‌ಗಾಗಿ ಜಿಎಸ್ಟಿ ಮಾಹಿತಿ ಹಂಚಿಕೆ

**(1ನೇ ಪುಟದಿಂದ)** ಮಾಹಿತಿ ಸಿಗುತ್ತದೆ. ಈ ವಿವರಣೆಯಿಂದ ರಾಜ್ಯಗಳ ಹಣಕಾಸು ಸಚಿವರಿಗೆ ತೃಪ್ತಿಯಾಗಿದೆ ಎಂದು ಭಾವಿಸಿದ್ದೇನೆ ಎಂದು ಮಲ್ಹೋತ್ರ ಹೇಳಿದ್ದಾರೆ.

ಅಧಿಸೂಚನೆಯೊಂದನ್ನು ಹೊರಡಿಸಿದ್ದ ಕೇಂದ್ರ ಸರ್ಕಾರ, ಅಕ್ರಮ ಹಣ ತಡೆ ಕಾಯ್ದೆಗೆ ತಿದ್ದುಪಡಿ ತಂದಿತ್ತು. ಆ ಮೂಲಕ ಜಾರಿ ನಿರ್ದೇಶನಾಲಯವು ಮಾಹಿತಿ ಹಂಚಿಕೊಳ್ಳುವ ಸಂಸ್ಥೆಗಳ ಸಾಲಿಗೆ ಜಿ.ಎಸ್.ಟಿ. ಜಾಲವನ್ನೂ ಸೇರ್ಪಡೆ ಮಾಡಿತ್ತು.

ಎಫ್.ಎ.ಟಿ.ಎಫ್. ಅನ್ವಯ ಈ ಅಧಿಸೂಚನೆಯ ಅಗತ್ಯವಿತ್ತು. ತೆರಿಗೆ ವಂಚನೆಯ ಮಾಹಿತಿ ಸಿಕ್ಕಾಗ, ಅದನ್ನು ಜಿ.ಎಸ್.ಟಿ. ಜಾಲದ ಜೊತೆ ಹಂಚಿಕೊಳ್ಳಲಾಗುತ್ತದೆ ಎಂದು ಮಲ್ಹೋತ್ರ ತಿಳಿಸಿದ್ದಾರೆ.

## ಅರ್ಹ ರೈತರಿಗೆ ಯಶಸ್ವಿನಿ ಕಾರ್ಡ್

**(1ನೇ ಪುಟದಿಂದ)** ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಂಡಿರುವ ಬಹುತೇಕ ಎಲ್ಲ ಕುಟುಂಬಗಳ 12.89 ಲಕ್ಷ ಕಾರ್ಡ್‌ಗಳ ಡೇಟಾ ಎಂಟ್ರಿ ಮಾಡಿ ಕಾರ್ಡ್‌ಗಳನ್ನು ತಯಾರಿಸಿ, ಜನವರಿ 7ರ ಅಂತ್ಯಕ್ಕೆ ಎಲ್ಲ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಗೆ ರವಾನಿಸಲಾಗಿದೆ. ಉಪನಿಬಂಧಕರು ಸಂಬಂಧಿಸಿದ ಸಹಕಾರ ಸಂಘಗಳ ಮೂಲಕ ಫಲಾನುಭವಿಗಳಿಗೆ ಕಾರ್ಡ್‌ಗಳನ್ನು ರವಾನಿಸುವ ವ್ಯವಸ್ಥೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಕುಟುಂಬದಲ್ಲಿನ ಸದಸ್ಯರನ್ನು ಹೊರತುಪಡಿಸಿ, ಬೇರೆ ಸದಸ್ಯರನ್ನು ಸೇರಿಸಿರುವುದು, ಒಂದಕ್ಕಿಂತ ಹೆಚ್ಚು ಸಂಘಗಳಲ್ಲಿ ಸೇರ್ಪಡೆಯಾಗಿರುವುದು ಹೀಗೆ ಬೇರೆ ಬೇರೆ ಕಾರಣಗಳಿಂದಾಗಿ 18,153 ಕುಟುಂಬಗಳ ಕಾರ್ಡ್‌ಗಳು ಅಂದರೆ ಸುಮಾರು 70 ಸಾವಿರ ಸದಸ್ಯರಿಗೆ ಸಂಬಂಧಿಸಿದಂತೆ ಡೇಟಾ ಎಂಟ್ರಿ ಮಾಡಲು ಸಾಧ್ಯವಾಗಿಲ್ಲ ಎಂದು ಕಾರ್ಡ್ ಮುದ್ರಣಕಾರರು ತಿಳಿಸಿದ್ದಾರೆಂದು ಮಾಹಿತಿ ನೀಡಿದರು.

ಇಂತಹ ದೋಷಗಳನ್ನು ಜಿಲ್ಲಾವಾರು ಪರಿಶೀಲಿಸಿ ಅರ್ಹ ಫಲಾನುಭವಿಗಳು ಎಂದು ದೃಢಪಟ್ಟಲ್ಲಿ ಅಂತಹ ಎಲ್ಲ ಸದಸ್ಯರಿಗೆ ಈ ತಿಂಗಳ ಅಂತ್ಯದೊಳಗೆ ಕಾರ್ಡ್‌ಗಳನ್ನು ವಿತರಿಸಲಾಗುವುದು. ಆದರೂ ಅರ್ಹ ಫಲಾನುಭವಿಗಳಿಗೆ ಕಾರ್ಡ್ ಲಭ್ಯವಾಗದೇ ಇರುವುದರಿಂದ ಚಿಕಿತ್ಸೆ ಪಡೆಯಲು ವ್ಯತ್ಯಯವಾಗದಂತೆ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದೆ ಎಂದರು.

ಈ ಯೋಜನೆಯಡಿ ನೋಂದಣಿಯಾಗಿರುವ 45 ಲಕ್ಷ ಸದಸ್ಯರಿಗೆ ಸಂಬಂಧಿಸಿದಂತೆ ಪ್ರತಿ ಕುಟುಂಬಕ್ಕೆ ಒಂದು ಕಾರ್ಡ್‌ನಂತೆ 12.89 ಲಕ್ಷ ಕಾರ್ಡ್‌ಗಳನ್ನು ಫಲಾನುಭವಿ ಕುಟುಂಬಗಳಿಗೆ ಜ.7ರೊಳಗೆ ಉಪನಿಬಂಧಕರ ಕಚೇರಿ ಮೂಲಕ ರವಾನಿಸಲಾಗಿದೆ ಎಂದರು.

ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಸಹಕಾರಿಗಳು ಮತ್ತು ಜನಪ್ರತಿನಿಧಿಗಳು ಯಶಸ್ವಿನಿ ಯೋಜನೆಯನ್ನು ಮರು ಜಾರಿಗೊಳಿಸಲು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಸರ್ಕಾರ ಕಳೆದ ಬಜೆಟ್‌ನಲ್ಲೇ ಪರಿಷ್ಕೃತ ಯೋಜನೆಯನ್ನು ಜಾರಿಗೊಳಿಸಿ ಘೋಷಣೆ ಮಾಡಿದೆ ಎಂದು ಹೇಳಿದರು.

ಇದನ್ನು ಎರಡು ಬಾರಿ ವಿಸ್ತರಣೆ ಮಾಡಲಾಗಿತ್ತು. ಒಟ್ಟು 30 ಲಕ್ಷ ಸದಸ್ಯರನ್ನು ನೋಂದಣಿ ಮಾಡುವ ಗುರಿ ನಿಗದಪಡಿಸಿದ್ದು, ಈಗಾಗಲೇ 45 ಲಕ್ಷಕ್ಕೂ ಹೆಚ್ಚು ಸದಸ್ಯರು ನೋಂದಣಿ ಮಾಡಿಕೊಂಡಿದ್ದಾರೆ. ರಾಜ್ಯಾದ್ಯಂತ ಇರುವ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಫಲಾನುಭವಿಗಳಿಗೆ ಚಿಕಿತ್ಸೆ ಕಲ್ಪಿಸಲು ಈ ಯೋಜನೆಯ ಅವಧಿಯನ್ನು ಡಿಸೆಂಬರ್ 23ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಉತ್ತರಿಸಿದರು.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ.: 98453 17181

**ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕೈಯರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು ಹಾಗೂ ಎಲ್ಲಾ ಸೌಕರ್ಯವಿರುವ ಅಪಾರ್ಟ್‌ಮೆಂಟ್‌ನಲ್ಲಿ ಎರಡು ಮನೆಗಳು ಭೋಗ್ಯಕ್ಕಿವೆ. - ಬಿ.ಎಸ್. ಸಂತೋಷ್
96322 67555

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ ಪೂರ್ವ 30x40 (ಮೇಲೆ-ಕೆಳಗೆ) 30x50 (ಮೇಲೆ-ಕೆಳಗೆ) 30x60 (Lift ಸೌಲಭ್ಯವಿದೆ) ಆಂಜನೇಯ ಬಡಾವಣೆ 40x50 (ಡುಪ್ಲೆಕ್ಸ್) ತರಳಬಾಳು ಬಡಾವಣೆ ದಕ್ಷಿಣ 30x60 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ್
99457 02495

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
SS ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**EC / ಇಸಿ, E-swathu, Khatha Change Building Licence & Other Property Documents**
96118-66449

**ಬಾಡಿಗೆಗೆ**
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಗ್ರೌಂಡ್ ಫ್ಲೋರ್ - 800 ಅಡಿ
2. ಮೊದಲನೇ ಮಹಡಿ - 4000 ಅಡಿ
3. ಎರಡನೇ ಮಹಡಿ - 4000 ಅಡಿ
4. Terrace Floor - 4000 ಅಡಿ
5. Basement - 4000 ಅಡಿ
ಸಂಪರ್ಕಿಸಿ : ಮೊ. 94480 28103

**ಮಾರಾಟಕ್ಕಿದೆ**
ದಾವಣಗೆರೆ, ಹರಪನಹಳ್ಳಿ ಮುಖ್ಯ ರಸ್ತೆಯಲ್ಲಿ ಮಾಗಾನಹಳ್ಳಿ ಹತ್ತಿರ 10 ಗುಂಟೆ ಜಮೀನು ಹಾಗೂ ಕಂಚಿಕೇರಿ ಹತ್ತಿರ ಜಮೀನು ಮಾರಾಟಕ್ಕಿದೆ.
99726 75759

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ ಪಶ್ಚಿಮ 30x50 (ಶಾರದಾಂಬ ದೇವಸ್ಥಾನ ಹತ್ತಿರ) ಬನಶಂಕರಿ ಬಡಾವಣೆ ಪಶ್ಚಿಮ 40x78 (ಅಕ್ಕ-ಪಕ್ಕ) (60 ಅಡಿ ರಸ್ತೆ, ಶಿವ-ಪಾರ್ವತಿ ಬಡಾವಣೆ ಪಶ್ಚಿಮ 50x78 (ಅಕ್ಕ-ಪಕ್ಕ) (60 ಅಡಿ ರಸ್ತೆ & 40 ಅಡಿ ರಸ್ತೆ) ಪೂರ್ವ 40x55, 30x55, 30x43,40x60.
ಐಗೂರು ವಿಜಯಕುಮಾರ್
99457 02495

**ಮನೆ ಬಾಡಿಗೆಗೆ ಬೇಕಾಗಿದೆ**
ಹರಿಹರದಲ್ಲಿ ಅಥವಾ ಹೊಸಬಾತಿಯಲ್ಲಿ ಮನೆ ಖಾಲಿ ಇದ್ದರೆ ತಿಳಿಸಿ. ಬಾಡಿಗೆಗೆ ಬೇಕಾಗಿದೆ.
70220 76255

**ಮನೆಗಳು ಬಾಡಿಗೆಗೆ ಇವೆ**
1BHK ಗ್ರೌಂಡ್ ಫ್ಲೋರ್ ಮತ್ತು 2BHK ಫಸ್ಟ್ ಫ್ಲೋರ್ ಮನೆಗಳು ಅಶೋಕ ಟಾಕೀಸ್ ಹತ್ತಿರದ ಟಿ.ಸಿ. ಲೇಔಟ್‌ನಲ್ಲಿ ಬಾಡಿಗೆಗೆ ಇವೆ.
94485 34147, 79758 46679

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ.
89048 09492

**ತಕ್ಷಣ ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೌಂಟರ್ ಕೆಲಸಕ್ಕೆ ಹೆಣ್ಣು ಮಕ್ಕಳು ಬೇಕಾಗಿರುತ್ತಾರೆ. ಆಸಕ್ತರು ಸಂಪರ್ಕಿಸಿ.
94485 34147, 79758 46679

**ಬೇಕಾಗಿದ್ದಾರೆ**
ಶಕ್ತಿ ನಗರದಲ್ಲಿರುವ ಮಿನಿ ಮಾರ್ಟ್‌ನಲ್ಲಿ (ದಿನಸಿ ಅಂಗಡಿ) ಕೆಲಸಕ್ಕೆ ಅನುಭವವಿರುವ ಸಿಬ್ಬಂದಿ ಬೇಕಾಗಿದ್ದಾರೆ. ಸೂಚನೆ : ಕಂಪ್ಯೂಟರ್ ಬಿಲ್ಲಿಂಗ್ ಮಾಡಿರುವ ಅನುಭವವಿರಬೇಕು. ಕೆಲಸದ ಸಮಯ : ಬೆಳಿಗ್ಗೆ 8.30 to 1.30 , 4.30 ರಿಂದ ರಾತ್ರಿ 9 ಸಂಪರ್ಕಿಸಿ :
99729 11344

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**JOB PLACEMENT AVAILABLE**
SAUDI ARABI-DUBAI + OMAN QATAR - KUWAIT + EUROPE + CANADA, UK and USA.
Rumaan Enterprises
Tours & Travels
7795445340, 88619 49530

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ಸ್ ಸ್ಯಾರಿ ಸೆಂಟರ್, ಬಿನ್ನಿ ಕಂಪನಿ ರೋಡ್, ದಾವಣಗೆರೆ -1.

**ನೇರ ಪರೀಕ್ಷೆಗಳು**
PUC - ARTS / COMM/SCIENCE
NTC - ನರ್ಸರಿ ಟೀಚರ್ಸ್ ಟ್ರೇನಿಂಗ್.
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ -2 ವರ್ಷ. (Regular)
ಶ್ರೀ ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಲಾಯರ್ ರೋಡ್ ,ದಾವಣಗೆರೆ.
86602 35013

**ದಾನೇಶ್ ಹೋಂ ಡೆಕೋರ್**
(ಗೃಹ ಅಲಂಕಾರಿಕ ಹೂಗಳು ಮತ್ತು ಮೀನುಗಳ ಅಂಗಡಿಯಲ್ಲಿ) ಕೆ.ಟಿ.ಜೆ. ನಗರ ಹಾಗೂ ಜಯನಗರ ದಾವಣಗೆರೆ ಇಲ್ಲಿ ಕೆಲಸಕ್ಕೆ ಮಹಿಳೆಯರು ಹಾಗೂ ಯುವಕರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ ನೀಡಲಾಗುವುದು
98453 70694

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಆತಿಥ್ಯ ರೆಸ್ಟೋರೆಂಟ್**
ಶುದ್ಧ ತಾಜಾ ಮಸಾಲಾ ದೋಸೆ ಹಿಟ್ಟು ದೊರೆಯುತ್ತದೆ.
ಸಂಪರ್ಕಿಸಿ :
81475 47421

**HOUSE FOR RENT**
2 BHK North facing with Borewell & Muncipal water and parking facility available at 11th Main, Opp. Indoor Stadium, S.S. Layout A Block.
AHMED 94481 34006

**WANTED**
Accountant, Electrician & Chemist. Experience must be required. *Male Only.*
Aradhya Chemical & Fertelizers
# 115/1, Old P.B. Road, Beside Panjurli Hotel, Davangere.
Mob. : 87228 55609

**ಗ್ಯಾಸ್ ಗೀಜರ್**
Fully Automatic 2990/- Rs.
R.O. +uv ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ವಿಶೇಷ ತರಬೇತಿ**
ವಿಶೇಷ ಚೇತನ-ದಿವ್ಯಾಂಗ, ವಾಕ್-ಶ್ರವಣ ಸಮಸ್ಯೆ, ದೃಷ್ಟಿ ಸಮಸ್ಯೆಯ ಮಕ್ಕಳಿಗೆ ನುರಿತ ತರಬೇತುದಾರ ಶಿಕ್ಷಕರಿಂದ ವಿಶೇಷ ತರಬೇತಿ ನೀಡಲಾಗುತ್ತದೆ. ಜ್ಞಾನಧಾರೆ ಪುನರುತ್ಥಾನ ವಿದ್ಯಸಂಸ್ಥೆ (ರಿ) ಸಂಪರ್ಕಿಸಿ.
95903 80251, 63616 66308
(ಹಾಸ್ಟೆಲ್ ವ್ಯವಸ್ಥೆ ಇರುತ್ತದೆ.)


**ಬೇಕಾಗಿದ್ದಾರೆ**
ಎಸ್.ಎಸ್. ಬಡಾವಣೆ ಕ್ಲಾಕ್ ಟವರ್ ಸರ್ಕಲ್ ಹತ್ತಿರ ಪ್ರತಿದಿನ ಬೆಳಿಗ್ಗೆ ಕಾಂಪೌಂಡ್ ಕಸಗುಡಿಸಿ, ಕಾರ್ ತೊಳೆಯಲು ಹಾಗೂ ಇತರೆ ಸಣ್ಣಪುಟ್ಟ ಕೆಲಸ ಮಾಡಿಕೊಡುವ ಹುಡುಗ ಬೇಕಾಗಿದ್ದಾನೆ. ಸಂಪರ್ಕಿಸಿ.
98804 88688

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಮಂಡಿಪೇಟೆಯ ಒಳ ಪ್ಯಾಸೇಜ್ ನಲ್ಲಿ 25x37 ಅಡಿ ಅಳತೆಯ 10 ಅಡಿ ಪ್ಯಾಸೇಜ್ ನಲ್ಲಿ 2 ಸೈಟುಗಳು ಮಾರಾಟಕ್ಕಿವೆ. (Dr. Arunkmar dentist ಪಕ್ಕ).
ಸಂಪರ್ಕಿಸಿ. 97424 34049

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯಲ್ಲಿ 30x50 ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ ವಾಸ್ತು ಪ್ರಕಾರ ಇರುವ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**TALLY + BASIC + DATA ENTRY + PHOTOSHOP**
ಕಲಿಯಿರಿ
Fees : 1500/- Only
91081 85926

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED**
Accountant
Qualification B.Com, BBM, MBA.
Requirement for Davangere Branch
Experience 2 Year Tally ERP 9
Sri Lakshmi Venkateshwara Granites & Marbles
# 2002/1 to 2002/7, Taralabalu Extn., Hadadi Main Road, Davangere-577004.
E-mail : slvgmdvg2010@gmail.com
90086-60111

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**ತರಬೇತಿ**
ಬ್ಯೂಟಿಷಿಯನ್, ಟೈಲರಿಂಗ್, ಫ್ಯಾಷನ್ ಡಿಸೈನರ್, ಹ್ಯಾಂಡ್ ಎಂಬ್ರಾಯ್ಡರಿ ಮತ್ತು ಅನೇಕ ಕೋರ್ಸ್‌ಗಳ ತರಬೇತಿ ಕೊಡಲಾಗುತ್ತದೆ. ಕಲಿಯಲು ಆಸಕ್ತಿಯುಳ್ಳವರು ಸಂಪರ್ಕಿಸಿ:
81518 72582

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಸಂಬಳ ಸಂಬಳ
8000-11000
+91 88845 95873
+91 87920 48458

**RENT - ಬಾಡಿಗೆಗೆ GODOWN ಗೋಡೌನ್**
5000 Sqft, APMC `D' Block, Davanagere.
Contact :
94489 24115

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**ಬೇಕಾಗಿದ್ದಾರೆ**
B.A., B.Ed., ಮತ್ತು B.Sc., B.Ed., (PCM/CBZ) ಶಿಕ್ಷಕರು ಹಾಗೂ ಆಯಾ ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್ 6ನೇ ಕ್ರಾಸ್‌ನಲ್ಲಿರುವ ಹೊಸ RTO ಕಚೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
ಕಾರ್ಯದರ್ಶಿ, 99640 17729

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ
ಲಾಯರ್ ರಸ್ತೆ, ದಾವಣಗೆರೆ.
9740064163

**PART TIME JOB WORK FROM HOME**
ನಿಮ್ಮ ಬಿಡುವಿನ ವೇಳೆಯಲ್ಲಿ, ಮನೆಯಲ್ಲಿಯೇ ಕೆಲಸ ಮಾಡಿ ತಿಂಗಳಿಗೆ 6000 ದಿಂದ 9000 ಸಂಪಾದಿಸಿರಿ, ಸಂಪರ್ಕಿಸಿ :
76196 57751, 89714 63581

**ಹಿರಿಯರ ನಾಗರಿಕ ಆರೈಕೆ ಕೇಂದ್ರ**
ವಯೋವೃದ್ಧರನ್ನು ಮತ್ತು ಅನಾರೋಗ್ಯ ಪಿಡೀತ ಬೆಡ್ ರಿಡನ್ ಪೇಷೆಂಟ್‌ಗಳನ್ನು ನಮ್ಮಲ್ಲಿಯೇ, ಇರಿಸಿಕೊಂಡು ಊಟ, ವಸತಿಯೊಂದಿಗೆ ಅವರ ಹೆಚ್ಚಿನ ಆರೈಕೆ ಮಾಡಲಾಗುವುದು.
63635 85792

**2 BHK HOUSE FOR RENT/LEASE**
near podar international in J.H. Patel Badavane, Davangere.
95358 41058

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

# ತಂಬಾಕು, ಮದ್ಯಪಾನ ಸೇವನೆಯಿಂದ ಕ್ಯಾನ್ಸರ್, ಬಂಜೆತನಕ್ಕೆ ತುತ್ತು



**ಹೊಳೆಸಿರಿಗೆರೆ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚೇತನ್ ಎಚ್ಚರಿಕೆ**

ಮಲೇಬೆನ್ನೂರು, ಜು. 11 - ತಂಬಾಕು ಸೇವನೆ ಮಾಡಿದವರು ಕ್ಯಾನ್ಸರ್ ಕಾಯಿಲೆಗಳಿಗೆ ತುತ್ತಾಗಿ ಜೀವನ ಕೊನೆ ಮಾಡಿಕೊಳ್ಳುತ್ತಾರೆಂದು ಹೊಳೆಸಿರಿಗೆರೆ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಚೇತನ್ ಹೇಳಿದರು.

ಹೊಳೆಸಿರಿಗೆರೆ ಗ್ರಾಮದ ಮಾಗೋಡು ಹಾಲಪ್ಪ ಪ್ರೌಢಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಇಂದು ಆಯೋಜಿಸಿದ್ದ ವಿಶ್ವ ತಂಬಾಕು ದಿನಾಚರಣೆ ಹಾಗೂ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ತಂಬಾಕು, ಮದ್ಯಪಾನ ಸೇವನೆ ಮಾಡಿದವರು ಲಿವರ್ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಬಾಯಿ ಕ್ಯಾನ್ಸರ್ ಹಾಗೂ ಬಂಜೆತನಕ್ಕೆ ಒಳಗಾಗುತ್ತಾರೆ ಎಂದರು.

ಸಂಪನ್ಮೂಲ ವ್ಯಕ್ತಿ ಹೆಚ್.ಎಂ. ಸದಾನಂದ ಮಾತನಾಡಿ, ಭಾರತದ ಇಪ್ಪತ್ತೇಳುವರೆ ಕೋಟಿ ಯುವಜನತೆ ಮಾದಕ ಚಟಕ್ಕೆ ದಾಸರಾಗಿದ್ದು ಪ್ರತಿವರ್ಷ ಹದಿಮೂರು ಲಕ್ಷ ಯುವಜನತೆ ವ್ಯಸನಿಗಳಾಗಿ ಮರಣ ಹೊಂದುತ್ತಿದ್ದಾರೆ. ಭಾರತದ ಕಲ್ಕತ್ತಾ, ಬಾಂಬೆ, ಬೆಂಗಳೂರು ಮಾದಕ ನಗರ ಎಂದು ಖ್ಯಾತಿ ಪಡೆದಿದ್ದು ಬೆಂಗಳೂರಿನಲ್ಲೇ ವಾರ್ಷಿಕ 280 ಕೋಟಿ ರೂಪಾಯಿ ವ್ಯಾಪಾರ ಮಾದಕ ವಸ್ತುವಿನಿಂದ ನಡೆಯುತ್ತಿದೆ ಎಂದರು.

ಕರ್ನಾಟಕದ ಹಂಪೆ, ಮೈಸೂರು, ಮಂಗಳೂರು, ಗೋಕರ್ಣ, ಉಡುಪಿ, ಧಾರವಾಡ ವಿದೇಶಿ ಪೆಡ್ಲರ್‌ಗಳಿಂದ ಮಾದಕ ವಸ್ತು ಹರಡುತ್ತಿದೆ ವಿಶ್ವದ 80 ಭಾಗ ದೇಶಗಳಿಗೆ ನೇಪಾಳ ದೇಶವೇ ಮಾದಕ ವಸ್ತುವನ್ನು ಹರಡುತ್ತಿದೆ ಎಂದರು.

14 ರಿಂದ 26 ವಯಸ್ಸಿನ ಯುವಕ-ಯುವತಿಯರು ಹೆಚ್ಚಾಗಿ ಈ ಚಟಕ್ಕೆ ಬಲಿಯಾಗಿರುವುದು ನಿಮ್ಹಾನ್ಸ್ ಸಮೀಕ್ಷೆಯಿಂದ ತಿಳಿದು ಬಂದಿದೆ. ಅವಧಿ ಮುಕ್ತಾಯವಾದ ಮಾತ್ರೆಗಳನ್ನು ನಶೆ ಬರಲು ಬಳಸಲಾಗುತ್ತಿದೆ. ದಕ್ಷಿಣ ಕನ್ನಡದ ಶೇ. 80 ಭಾಗ ಯಕ್ಷಗಾನ ಕಲಾವಿದರೂ ಮಾದಕ ಚಟಕ್ಕೆ ಬಲಿಯಾಗಿದ್ದು, ದೇವಾಲಯದ ಗರ್ಭಗುಡಿಯಿಂದಲೂ ಡ್ರಗ್ಸ್ ತನ್ನ ಕದಂಭ ಬಾಹುವನ್ನು ಚಾಚಿದೆ ಎಂದು ಸದಾನಂದ್ ದೂರಿದರು.

ಶಾಲಾ ಸಲಹಾ ಸಮಿತಿ ಅಧ್ಯಕ್ಷ ಮಾಗೋಡು ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು. ಪ್ರಗತಿಪರ ರೈತ ಹಾಗೂ ಬರಹಗಾರ ಕುಂದೂರು ಮಂಜಪ್ಪ ಅವರು ರೈತ ಯೋಧ ಮತ್ತು ಗುರುಗಳ ಕಾಯಕ ನಿಷ್ಠೆಯನ್ನು ಸ್ಮರಿಸಿದರು.

ವಿದ್ಯಾರ್ಥಿಗಳಾದ ಮಲ್ಲೇಶ್, ಕಾರ್ತಿಕ್ ಅಭಿಪ್ರಾಯ ಹಂಚಿಕೊಂಡರು. ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ ದೇವಾಡಿಗ್, ವಲಯ ಮೇಲ್ವಿಚಾರಕ ರಂಗಸ್ವಾಮಿ, ಸೇವಾ ಪ್ರತಿನಿಧಿಗಳಾದ ಮಂಜುಳ, ಜ್ಯೋತಿ, ಗೀತಾ, ನಾಗರಾಜ್, ಆಶಾ ಕಾರ್ಯಕರ್ತೆ ಮಾಲಾಶ್ರೀ, ನೀಲಾಂಬಿಕೆ ಮತ್ತು ಶಾಲಾ ಮುಖ್ಯ ಶಿಕ್ಷಕ ಲೋಕೇಶ್ ಹಾಜರಿದ್ದರು.

## ದಾವಣಗೆರೆ ವಿವಿಯಲ್ಲಿಂದು ಸಮ್ಮೇಳನ

ದಾವಣಗೆರೆ ವಿಶ್ವವಿದ್ಯಾನಿಲಯದ ಐಸಿಎಸ್‌ಆರ್ ಪ್ರಾಯೋಜಿತ 'ಆತ್ಮನಿರ್ಭರ್ ಭಾರತ್ ಅಂಡ್ ಮ್ಯಾನೇಜ್‌ಮೆಂಟ್ ಎಜುಕೇಶನ್ ಇನ್ ಇಂಡಿಯಾ ನ್ಯೂ ಡೈರೆಕ್ಷನ್ಸ್ ಅಂಡ್ ಪರ್ಸ್ಪೆಕ್ಟಿವ್ಸ್' ರಾಷ್ಟ್ರೀಯ ಮಟ್ಟದ ಸಮ್ಮೇಳನವು ಇಂದು ಬೆಳಿಗ್ಗೆ 10ಕ್ಕೆ ವಿಶ್ವವಿದ್ಯಾನಿಲಯದ ಎಂಬಿಎ ಸಭಾಂಗಣದಲ್ಲಿ ನಡೆಯಲಿದೆ. ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ದಾವಿವಿ ವಿಶ್ರಾಂತ ಕುಲಪತಿ ಪ್ರೊ. ಎಂ.ಎಸ್. ಸುಭಾಸ್, ಅಥಣಿ ವೀರಣ್ಣ, ಪ್ರೊ. ರಾಮಪ್ಪ ಕೆ.ಬಿ., ಡಾ. ಸುರೇಶ್ ಬಿ.ಪಿ. ಆಗಮಿಸುವರು. ಅಧ್ಯಕ್ಷತೆಯನ್ನು ಪ್ರೊ. ಬಿ.ಡಿ. ಕುಂಬಾರ ವಹಿಸುವರು. ಗೌರವ ಉಪಸ್ಥಿತರಾಗಿ ಶ್ರೀಮತಿ ಬಿ.ಬಿ. ಸರೋಜ, ಡಾ. ಶಿವಶಂಕರ್ ಕೆ., ಡಾ. ಲಕ್ಷ್ಮಣ ಪಿ., ಶ್ರೀಮತಿ ಪ್ರಿಯಾಂಕ ಡಿ. ಭಾಗವಹಿಸುವರು.

## ವಿದ್ಯುತ್ ವ್ಯತ್ಯಯ

ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನ, ನಿಟ್ಟುವಳ್ಳಿ, ರಾಷ್ಟ್ರೋತ್ಥಾನ ಶಾಲೆ, ಮಣಿಕಂಠ ಸರ್ಕಲ್, ಶ್ರೀ ರಾಮ ಬಡಾವಣೆ, ಜಯನಗರ ಎ ಬ್ಲಾಕ್& ಬಿ ಬ್ಲಾಕ್, ದುರ್ಗಾಂಬಿಕಾ ಶಾಲಾ ರಸ್ತೆ, ಬೆಸ್ಕಾಂ ಆಫೀಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಇರುವುದಿಲ್ಲ.

# ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತನೆ ಮಾಡಿಕೊಳ್ಳಬೇಕು



**ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮದಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ನೋಡಲ್ ಅಧಿಕಾರಿ ಆರ್.ಬಿ. ವಸಂತಕುಮಾರಿ**

ದಾವಣಗೆರೆ, ಜು. 11 - ಪ್ರಸ್ತುತ ಭಾರತದ ಜನಸಂಖ್ಯೆ 135 ಕೋಟಿಗೂ ಅಧಿಕವಾಗಿದೆ. ಜನಸಂಖ್ಯೆಯಲ್ಲಿ ಭಾರತ ದೊಡ್ಡ ದೇಶವಾಗಿ ಬೆಳೆಯುತ್ತಿದೆ. ಈ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತನೆ ಮಾಡಿಕೊಳ್ಳಬೇಕು ಇದು ನಮ್ಮ ಕೈಯಲ್ಲಿದೆ ಇದರ ಸದ್ಬಳಕೆ ಮಾಡಿಕೊಳ್ಳಬೇಕು. ಈ ಮಾನವ ಸಂಪನ್ಮೂಲ ಸರಿಯಾದ ಮಾರ್ಗದಲ್ಲಿ ಸಾಗಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ನೋಡಲ್ ಅಧಿಕಾರಿ ಶ್ರೀಮತಿ ಆರ್.ಬಿ. ವಸಂತಕುಮಾರಿ ತಿಳಿಸಿದರು.

ಆನಗೋಡು ಸಮೀಪದ ಉಳುಪನಕಟ್ಟೆ ಗ್ರಾಮದಲ್ಲಿರುವ ಉಪ- ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ವಿಶ್ವ ಜನಸಂಖ್ಯಾ ದಿನಾಚರಣೆ ಪ್ರಯುಕ್ತ ಇಂದು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಮಾನಗಳಲ್ಲಿ ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೌಶಲ್ಯ ಕಡಿಮೆಯಾಗುತ್ತಿದೆ. ಪ್ರಬಂಧ ಸ್ಪರ್ಧೆಯು ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೌಶಲ್ಯವನ್ನು ವೃದ್ಧಿಸುತ್ತದೆ. ಜನಸಂಖ್ಯಾ ಸ್ಫೋಟದಿಂದ ಆಗುತ್ತಿರುವ ಪರಿಣಾಮಗಳ ಬಗ್ಗೆ ಮತ್ತು ಪರಿಹಾರೋಪಾಯಗಳ ಕುರಿತಂತೆ ತಮ್ಮ ಆಲೋಚನೆಗಳನ್ನು ಬರವಣಿಗೆ ಮೂಲಕ ಅಭಿವ್ಯಕ್ತಿಗೊಳಿಸುವುದಕ್ಕೆ ಈ ಪ್ರಬಂಧ ಸ್ಪರ್ಧೆ ಒಳ್ಳೆಯ ಅವಕಾಶವನ್ನು ಒದಗಿಸಿಕೊಡುತ್ತದೆ ಎಂದು ಹೇಳಿದರು.

ಕುರ್ಕಿ ಸರ್ಕಾರಿ ಪ್ರೌಢಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಸಿ. ಜಿ. ಜಗದೀಶ್ ಕೂಲಂಬಿ ಮಾತನಾಡಿ, ಜನಸಂಖ್ಯೆಯು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಒಟ್ಟು ಜನರನ್ನು ಸೂಚಿಸುತ್ತದೆ. ನಮ್ಮ ದೇಶದ ಜನಸಂಖ್ಯೆ ತ್ವರಿತ ಬೆಳವಣಿಗೆಯು ಇಂದು ಕಳವಳಕ್ಕೆ ಕಾರಣವಾಗಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಕೃಷಿ ಕೈಗಾರಿಕೆ ವೈಜ್ಞಾನಿಕ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುವಲ್ಲಿ ದೊಡ್ಡ ಸವಾಲಾಗಿ ಪರಿಣಮಿಸಿದೆ.1987 ರ ಜುಲೈ 11 ರಂದು ವಿಶ್ವದ ಜನಸಂಖ್ಯೆ ಐದು ಬಿಲಿಯನ್ ತಲುಪಿತು. ಇದರ ಅಂಗವಾಗಿ ವಿಶ್ವಸಂಸ್ಥೆ ಜುಲೈ 11ರಂದು ವಿಶ್ವ ಜನಸಂಖ್ಯಾ ದಿನಾಚರಣೆ ಎಂದು ಘೋಷಿಸಲಾಯಿತು. ಪ್ರಯುಕ್ತ ಇಂದು ವಿಶ್ವ ಜನಸಂಖ್ಯಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಬಿಂದುಶ್ರೀ ಕೆ. ಸರ್ಕಾರಿ ಪ್ರೌಢಶಾಲೆ ಕಬ್ಬೂರು, ದ್ವಿತೀಯ ಬಹುಮಾನವನ್ನು ಹರ್ಷಿತ ಎಚ್‌ಎನ್ ಸರ್ಕಾರಿ ಪ್ರೌಢಶಾಲೆ ಹಾಲವರ್ತಿ, ತೃತೀಯ ಬಹುಮಾನವನ್ನು ಅನು ಎನ್. ಪಿ. ಸರ್ಕಾರಿ ಪ್ರೌಢಶಾಲೆ ಕಂದನಕೋವಿ ಇವರು ಪಡೆದರು.

ಪ್ರಬಂಧ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಸಮಾಜ ವಿಜ್ಞಾನ ಶಿಕ್ಷಕರಾದ ವಿ. ಪರಮೇಶ್ವರಯ್ಯ, ಬಾಬು ಬುಡನ್ ಬಿ, ಹಾಗೂ ಸಿ ಜಿ ಜಗದೀಶ್ ಕೂಲಂಬಿ ಕಾರ್ಯ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಶಿಕ್ಷಕರುಗಳಾದ ಮಾರುತೇಶ್ ಎಸ್, ಸುಧಾಕರ ಜಿಎನ್, ಬಾಬು ಬುಡೇನ್, ಪ್ರಕಾಶ್ ಕೆಎಸ್, ಹನುಮಂತಪ್ಪ ಕೆ, ರಾಧಾ ಎಂ ಎಚ್, ವಿರೂಪಾಕ್ಷಿ ಹೆಚ್, ಪರಮೇಶ್ವರಯ್ಯ ವಿ, ಸಿ ಮಹಾಂತೇಶ್, ಟೆಕ್ನಿಕಲ್ ಅಸಿಸ್ಟೆಂಟ್ ಪ್ರವೀಣ್ ಮುಂತಾದವರು ಭಾಗವಹಿಸಿದ್ದರು.

ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಕ್ಯುರೇಟರ್ ಅರುಣ್ ನಿರೂಪಿಸಿದರು. ಶಿಕ್ಷಕ ಎಚ್ ವಿರೂಪಾಕ್ಷಿ ವಂದಿಸಿದರು.

## ಹೊಳೆಹೊನ್ನೂರಿನಲ್ಲಿ ಇಂದಿನಿಂದ ಶ್ರೀ ಸತ್ಯಾತ್ಮ ತೀರ್ಥರ ಚಾತುರ್ಮಾಸ್ಯ ವ್ರತ



ದಾವಣಗೆರೆ, ಜು. 11 - ಜಗದ್ಗುರು ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ ಶ್ರೀಮದುತ್ತಾರದಿ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರು ತಮ್ಮ 28ನೇ ಚಾತುರ್ಮಾಸ್ಯ ವ್ರತವನ್ನು ಶಿವಮೊಗ್ಗ ಜಿಲ್ಲೆಯ ಹೊಳೆ ಹೊನ್ನೂರು ಕ್ಷೇತ್ರದಲ್ಲಿ ಕೈಗೊಳ್ಳಲಿದ್ದಾರೆ. ಶ್ರೀಪಾದಂಗಳವರು ಇಂದು ಸಂಜೆ ಹೊಳೆಹೊನ್ನೂರು ಪುರ ಪ್ರವೇಶ ಮಾಡಿದರು.

ಹೊಳೆ ಹೊನ್ನೂರು ಸರ್ಕಲ್‌ನಿಂದ ಶ್ರೀಮನ್ ಮೂಲ ಸೀತ ರಾಮಚಂದ್ರ ದೇವರು ಹಾಗೂ ಶ್ರೀಗಳನ್ನು ಪೂರ್ಣಕುಂಭದೊಂದಿಗೆ ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು. ಬಳಿಕ ಶ್ರೀಪಾದರು ಬೃಂದಾವನದಲ್ಲಿ ಸನ್ನಿಹಿತರಾಗಿರುವ ತಮ್ಮ ಪರಂಪರೆಯ ಪೂರ್ವ ಗುರುಗಳಾದ ಶ್ರೀ ಸತ್ಯಧರ್ಮ ತೀರ್ಥ ಶ್ರೀಪಾದಂಗಳವರ ಮೂಲ ಬೃಂದಾವನದ ದರ್ಶನ ಪಡೆದರು.

ನಾಳೆ ದಿನಾಂಕ 12ರ ಬುಧವಾರ ಶ್ರೀ ಸತ್ಯಧರ್ಮತೀರ್ಥರ ಅನುಗ್ರಹದೊಂದಿಗೆ ಶ್ರೀ ಸತ್ಯಾತ್ಮತೀರ್ಥರು ಚಾತುರ್ಮಾಸ್ಯ ವ್ರತ ಸಂಕಲ್ಪ ಮಾಡಲಿದ್ದಾರೆ.

ಉತ್ತರಾದಿ ಮಠಾಧೀಶರ ಈ ಚತುರ್ಮಾಸ ಕಾರ್ಯಕ್ರಮವು ಇಂದಿನಿಂದ ಬರುವ ಸೆಪ್ಟೆಂಬರ್ 29 ರವರೆಗೆ ಹೊಳೆಹೊನ್ನೂರಿನಲ್ಲಿ ನಡೆಯಲಿದೆ. ಪ್ರತಿದಿನ ಶ್ರೀಗಳಿಂದ ಸಂಸ್ಥಾನ ದೇವರ ಪೂಜೆ ವಿವಿಧ ವಿದ್ವಾಂಸರಿಂದ ಪ್ರವಚನ, ಹಬ್ಬ ಹರಿದಿನಗಳಂದು ವಿಶೇಷ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಭಜನಾ ಮಂಡಳಿಗಳಿಂದ ಭಜನೆ, ಲೋಕ ಕಲ್ಯಾಣಾರ್ಥ ಹೋಮ, ಹವನಾದಿಗಳು ನಡೆಯಲಿವೆ.

ವಿವರಕ್ಕೆ ಸಂಪರ್ಕಿಸಿ : ಶ್ರೀನಿವಾಸಾಚಾರ್ಯ ನವರತ್ನ (9481064750), ಪುರುಷೋತ್ತಮಾಚಾರ್ಯ ನವರತ್ನ (9483721572), ರಘೋತ್ತಮಾಚಾರ್ಯ ಸೊಂಡೂರ್ (8762406466).

## ನಗರದಲ್ಲಿ ಇಂದು ಆಮ್ ಆದ್ಮಿ ಪಕ್ಷದ ಧರಣಿ

ಎಸ್.ಪಿ. ಕಚೇರಿಯಿಂದ ಅಖ್ತರ್ ರಜಾ ಸರ್ಕಲ್‌ವರೆಗೂ ರಿಂಗ್ ರಸ್ತೆಯಲ್ಲಿ ವಿದ್ಯುತ್ ದೀಪ ಮತ್ತು ಹಂಪ್ಸ್ ಅಳವಡಿಸದಿರುವುದನ್ನು ವಿರೋಧಿಸಿ, ಆಮ್ ಆದ್ಮಿ ಪಕ್ಷದಿಂದ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೂ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಆದಿಲ್ ಖಾನ್ ತಿಳಿಸಿದ್ದಾರೆ.

# ಜಿಯೋ, ಏರ್‌ಟೆಲ್ ಸೆಟ್‌ಅಪ್ ಬಾಕ್ಸ್ ಅಳವಡಿಕೆ ತಡೆಯಲು ಆಗ್ರಹ



ದಾವಣಗೆರೆ, ಜು. 11- ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಕೇಬಲ್ ಟಿವಿಗಳಿಗೆ ಅಳವಡಿಸುತ್ತಿರುವ ಜಿಯೋ ಮತ್ತು ಏರ್‌ಟೆಲ್ ಕಂಪನಿಗಳ ಸೆಟ್‌ಅಪ್ ಬಾಕ್ಸ್ ತಡೆಯುವಂತೆ ಆಗ್ರಹಿಸಿ ಕರವೇ ಜಿಲ್ಲಾ ಘಟಕ, ದಾವಣಗೆರೆ ನಗರ ಮತ್ತು ಗ್ರಾಮಾಂತರ ಕೇಬಲ್ ಆಪರೇಟರ್ ಅಸೋಸಿಯೇಷನ್ ವತಿಯಿಂದ ಇಂದು ಬೈಕ್ ರ‍್ಯಾಲಿ ನಡೆಸಲಾಯಿತು.

ಶಾಮನೂರು ರಸ್ತೆಯಲ್ಲಿನ ಕಾಸಲ್ ವಿಠಲ್ ಉದ್ಯಾನವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೈಕ್ ರ‍್ಯಾಲಿ ಹೊರಟು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಅವರು, ಹೊರ ರಾಜ್ಯದ ಖಾಸಗಿ ಕಂಪ ನಿಗಳು ನಡೆಸುತ್ತಿರುವ ದಾಳಿಯನ್ನು ಕರವೇ ಖಂಡಿಸುತ್ತದೆ. ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿ ಕೇಬಲ್ ಮೂಲಕ ಸಮಸ್ತ ನಾಗರಿಕರಿಗೆ ಮನರಂಜನೆ, ಸುದ್ದಿ ಪ್ರಸಾರ ಮಾಡುತ್ತಿರುವ ಕೇಬಲ್ ಆಪರೇಟರ್‌ಗಳ ಬದುಕು ಬೀದಿಗೆ ಬರುವ ಸ್ಥಿತಿ ನಿರ್ಮಾಣವಾಗಿದೆ ಎಂದು ಕಿಡಿಕಾರಿದರು.

ಈಗಾಗಲೇ ನಗರದಲ್ಲಿ ಸ್ಥಳೀಯ ಐದು ಕೇಬಲ್ ನೆಟ್‌ವರ್ಕ್‌ಗಳಾದ ಮೆಟ್ರೋ ಕಾಸ್ಟ್, ಬಸವ ಕೇಬಲ್ ನೆಟ್‌ವರ್ಕ್, ಗ್ಲೋಬಲ್ ವಿಜನ್, ಹಾಥ್ ವೇ ಡಿಜಿಟಲ್ ಲಿಮಿಟೆಡ್ ಮತ್ತು ವಿಕ್ಟರಿ ಡಿಜಿಟಲ್‌ಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳಿಗೆ ಕೇಬಲ್ ಆಪರೇಟರ್‌ಗಳೇ ಜೀವಾಳ ಎಂದರು.

ಜಿಯೋ, ಏರ್‌ಟೆಲ್ ಕಂಪನಿಯವರು ರಾಜ್ಯಾದ್ಯಂತ ಯೂನಿಫೈಡ್ ಟೆಲಿಕಾಂ ಲೈಸನ್ಸ್ ಹೊಂದಿದ್ದು, ಇವರಿಗೆ ಕೇಬಲ್ ಟಿವಿ ಸಂಪರ್ಕ ಕೊಡುವ ಹಕ್ಕಿರುವುದಿಲ್ಲ. ಆದರೂ ಅನಧಿಕೃತವಾಗಿ ನೀಡುತ್ತಿದ್ದು, ಕೇಬಲ್ ಆಪರೇಟರ್ ಗಳ ಮೇಲೆ ದುಷ್ಪರಿಣಾಮ ಬೀರಿದೆ ಎಂದು ಹೇಳಿದರು. ಜಿಯೋ ಮತ್ತು ಏರ್‌ಟೆಲ್ ಸಂಸ್ಥೆಯವರು ಇಂಟರ್‌ನೆಟ್ ಸೇವೆಯನ್ನು ಸಾರ್ವಜನಿಕರಿಗೆ ನೀಡಿದರೆ ನಮ್ಮ ಅಭ್ಯಂತರವಿಲ್ಲ. ಇ ಸೇವೆಯ ಜೊತೆಗೆ ಕೇಬಲ್ ಟಿವಿ ಸಂಪರ್ಕ ಕೊಡಲು ಮುಂದಾಗಿದ್ದಾರೆ. ಇದಕ್ಕೆ ಕರವೇ ಹಾಗೂ ನಗರ ಮತ್ತು ಗ್ರಾಮಾಂತರ ಕೇಬಲ್ ಆಪರೇಟರ್ ಅಸೋಸಿಯೇಷನ್ ವಿರೋಧ ವ್ಯಕ್ತಪಡಿಸಿದೆ.

ದಾವಣಗೆರೆ ಜಿಲ್ಲೆಯಲ್ಲಿ ಕಳೆದ 35 ವರ್ಷಗಳಿಂದ 400 ಕ್ಕೂ ಹೆಚ್ಚು ಕೇಬಲ್ ಆಪರೇಟರ್‌ಗಳು ಸಣ್ಣ ಬದುಕು ಕಟ್ಟಿಕೊಂಡಿದ್ದಾರೆ. ಆದರೆ ಜಿಯೋ ಕಂಪನಿ ಈ ಬದುಕನ್ನು ಬೀದಿಗೆ ತರುವ ಕೆಲಸ ಮಾಡುತ್ತಿದೆ. ಇದರಿಂದ ಒಂದು ಸಾವಿರ ಜನ ಬೀದಿಗೆ ಬೀಳುಂತಾಗಿದೆ. ಇವರೆಲ್ಲರೂ ಕನ್ನಡಿಗರೇ ಆಗಿದ್ದಾರೆ. ಹೊರ ರಾಜ್ಯದಿಂದ ಬಂದಂತಹ ಇಂತಹ ಕಂಪನಿಯವರು ಕನ್ನಡಿಗರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಓ. ಮಹೇಶ್ವರಪ್ಪ, ಸುನೀಲ್ ಜಾಧವ್, ಬಾಬುರಾವ್, ನಾಗರಾಜಯ್ಯ, ಕೇಶವ್‌ಗೌಡ, ಸುನೀಲ್, ಶಾಂತಪ್ಪ, ಮಹಾಂತೇಶ್, ಹಿದಾಯತ್, ಸವಿತಾ, ಗೌರಮ್ಮ ಕರವೇ ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಮಂಜುಳಾ ಮಹಾಂತೇಶ್, ಗಣೇಶ್, ಸಂತೋಷ್, ರಫೀಕ್, ಜಬೀವುಲ್ಲಾ, ಮಲ್ಲಿಕಾರ್ಜುನ್, ಖಾದರ್ ಬಾಷಾ, ಹನುಮಂತಪ್ಪ, ನಾಗರಾಜ್, ರವಿಕುಮಾರ್, ಮಧು, ಮಂಜುನಾಥ್, ಕರಿಬಸವರಾಜ್, ಮಲ್ಲಿಕಾರ್ಜುನ್, ಜಯಪ್ಪ, ಮೂರ್ತಿ, ಉಮೇಶ್, ರಾಜು, ಹಾಲೇಶ್, ಮಂಜಣ್ಣ, ಬಸಣ್ಣ ಮತ್ತಿತರರಿದ್ದರು.

## ಅಮರನಾಥ ಯಾತ್ರೆ : ಯೋಗಕ್ಷೇಮ ವಿಚಾರಿಸಿದ ಶಾಸಕ ಶಿವಗಂಗಾ

ಚನ್ನಗಿರಿ, ಜು.11- ಕ್ಷೇತ್ರದ ಜನರ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಾರೆ ಎಂಬುದಕ್ಕೆ ನಿದರ್ಶನ ಚನ್ನಗಿರಿ ಶಾಸಕ ಬಸವರಾಜು ವಿ ಶಿವಗಂಗಾ ಅವರು ಎಂದರೆ ತಪ್ಪಾಗುವುದಿಲ್ಲ.

ತಮ್ಮ ಕ್ಷೇತ್ರದ ಅಭಿವೃದ್ಧಿ, ಜನರ ಸಮಸ್ಯೆ ಹೀಗೆ ಯೋಚನೆ ಮಾಡುವ ಶಾಸಕರು, ಅಮರನಾಥ ಯಾತ್ರೆಗೆ ತೆರಳಿದ ಕ್ಷೇತ್ರದ ಜನರ ಬಗ್ಗೆಯೂ ಕಾಳಜಿ ಹೊಂದಿದ್ದಾರೆ.

ಚನ್ನಗಿರಿ ಕ್ಷೇತ್ರದಿಂದ ಈ ಬಾರಿ ಎಷ್ಟು ಮಂದಿ ತೆರಳಿದ್ದಾರೆ ಎಂಬುದರ ಕುರಿತು ಅಧಿಕಾರಿಗಳೊಂದಿಗೆ ಮಾಹಿತಿ ಪಡೆದು, ಅವರನ್ನು ಫೋನ್ ಕರೆ ಮೂಲಕ ಸಂಪರ್ಕಿಸಿ ಅವರ ಯೋಗಕ್ಷೇಮ ವಿಚಾರಿಸಿದ್ದಾರೆ.

ಅಮರನಾಥ ಸೇರಿದಂತೆ ಉತ್ತರ ಭಾರತ ಪ್ರವಾಸದಲ್ಲಿವವರಿಗೆ ಶುಭ ಕೋರಿ, ಯಾವುದೇ ಸಮಯದಲ್ಲಿ ನಿಮಗೆ ಸಣ್ಣ ಸಮಸ್ಯೆಯಾದರೂ ನನಗೆ ನೇರವಾಗಿ ಫೋನ್ ಕರೆ ಮಾಡಿ ಸಂಪರ್ಕಿಸಿ ಎಂದು ತಿಳಿಸಿದ್ದಾರೆ.

ಕ್ಷೇತ್ರದಿಂದ ಅಜ್ಜಿಹಳ್ಳಿಯ ಪ್ರಕಾಶ್, ವಸಂತ ಕುಮಾರ್, ರೇವಣ್ಣ, ಆದಿತ್ಯ, ಪ್ರಹ್ಲಾದ್, ನಲ್ಲೂರಿನ ಸತೀಶ್, ಚನ್ನಗಿರಿ ಪಟ್ಟಣದ ರಂಗಯ್ಯ, ತಿಪ್ಪಗೊಂಡನಹಳ್ಳಿಯಿಂದ ಮಂಜುನಾಥ್ ಡಿ.ಎಂ. ಹಳ್ಳಿಹಾಳು (ಪೆನ್ನಸಮುದ್ರ) ಗ್ರಾಮದ ಜಿ.ಎಸ್. ನಾಗರಾಜು ಅವರು ಇದೇ 7 ರಂದು ಶ್ರೀನಗರಕ್ಕೆ ತೆರಳಿ ಅಲ್ಲಿಂದ ಅಮರನಾಥಕ್ಕೆ ತೆರಳಿ, ದೇವರ ದರ್ಶನ ಪಡೆದು ಶ್ರೀನಗರದ ಮೂಲಕ ಕರ್ನಾಟಕಕ್ಕೆ ವಾಪಸ್ ಬರುತ್ತಿದ್ದಾರೆ.

**ಶಾಸಕ ಬಸವರಾಜು ವಿ. ಶಿವಗಂಗಾ ಅವರು ನಮಗೆ ಕರೆ ಮಾಡಿ ನಮ್ಮ ಯೋಗಕ್ಷೇಮ ವಿಚಾರಿಸಿದರು. ಎಲ್ಲರ ಬಗ್ಗೆ ಮಾಹಿತಿ ಪಡೆದು, ಏನೇ ಸಮಸ್ಯೆಯಿದ್ದರೂ ನನ್ನನ್ನು ಸಂಪರ್ಕಿಸಿ ಎಂದು ನಮಗೆ ತಿಳಿಸಿದರು. ನಮ್ಮ ಬಗ್ಗೆ ಶಾಸಕರಿಗೆ ಇರುವ ಕಾಳಜಿ ನೋಡಿ ತುಂಬಾ ಸಂತೋಷವಾಯಿತು.**

**- ಪ್ರಕಾಶ್ ಅಜ್ಜಿಹಳ್ಳಿ**



## ಓದುಗರ ಪತ್ರ

### ಸಸಿ ಹತ್ಯೆ- ಶಿಶು ಹತ್ಯೆಯಷ್ಟೇ ಮಹಾಪಾಪ

ಮಾನ್ಯರೇ

'ಮನೆಗೆರಡು ಮರ ದಾವಣಗೆರೆಗೆ ವರ' ಎನ್ನುವ ಧ್ಯೇಯೋದ್ದೇಶದೊಂದಿಗೆ ಕರುಣಾ ಟ್ರಸ್ಟ್ ಮತ್ತಿತರೆ ಸಂಘ ಸಂಸ್ಥೆಗಳ ವತಿಯಿಂದ ಈ ವರ್ಷ ಬಹಳ ಕಷ್ಟಪಟ್ಟು 3000 ಮರ ಗಿಡಗಳನ್ನು ಬೆಳೆಸುತ್ತಿದ್ದೇವೆ. ಪ್ರತಿವರ್ಷವೂ ಈ ಸತ್ಕಾರ್ಯ ಮಾಡುತ್ತಲೇ ಇದ್ದೇವೆ. ಇಂದಿನ ಮಕ್ಕಳೇ ನಾಳಿನ ಉತ್ತಮ ಪ್ರಜೆಗಳು ಎನ್ನುವಂತೆ, ಇಂದಿನ ಸಸಿಗಳು ನಾಳಿನ ಹೆಮ್ಮರಗಳಾಗುತ್ತವೆ. ಇಂದು ಮಕ್ಕಳನ್ನು ಉತ್ತಮ ರೀತಿಯಲ್ಲಿ ಪಾಲಿಸಿ ಪೋಷಿಸಿದರೆ ಅವರು ಮುಂದೆ ನಮ್ಮ ಮುಪ್ಪಿನ ಕಾಲದಲ್ಲಿ ನೆರವಾಗುತ್ತಾರೆ ಮತ್ತು ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಿ ನಿರ್ಮಾಣವಾಗುತ್ತಾರೆ. ಹಾಗೆಯೇ ಇಂದು ನಾವು ಉತ್ತಮ ರೀತಿಯಲ್ಲಿ ಸಸಿಗಳನ್ನು ಪೋಷಿಸಿ, ಬೆಳೆಸಿ ಮರಗಳನ್ನಾಗಿ ಮಾಡಿದರೆ ಮಾತ್ರ ನಮಗೂ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ಪರಿಸರ, ಆರೋಗ್ಯ ಬಿಟ್ಟು ಹೋಗಲು ಸಾಧ್ಯ.

ಆರೋಗ್ಯಕ್ಕೆ ಅಗತ್ಯವಾಗಿರುವ ಆಮ್ಲಜನಕವನ್ನು ಕೊಟ್ಟು, ಎಲ್ಲರ ಜೀವ ಉಳಿಸುವಂತಹ ಮರ, ಗಿಡಗಳನ್ನು ಕೇವಲ ಎಲೆ ಉದುರಿಸುತ್ತವೆ, ಕಾಂಪೌಂಡ್ ಒಡೆಯುತ್ತವೆ ಎಂಬ ಕ್ಷುಲ್ಲಕ ಕಾರಣಕ್ಕೆ ರಾತ್ರೋ ರಾತ್ರಿ ಕಡಿದು ಹಾಕುತ್ತಿದ್ದಾರೆ. ಪುಟ್ಟ ಸಸಿಗಳನ್ನು, ಬಳ್ಳಿಗಳನ್ನು ಚಿವುಟಿ ಹಾಕುತ್ತಿದ್ದಾರೆ. ಗಿಡಗಳನ್ನು ಬೆಳೆಯುವ ಹಂತದಲ್ಲಿಯೇ ಹಾನಿಗೊಳಿಸುವುದು, ಬೆಳೆದು ನಿಂತಿರುವ ಮರಗಳಿಗೆ ಆಸಿಡ್ ಹಾಕುವುದು, ಕತ್ತರಿಸಿ ಹಾಕುವುದು, ಇದು ಅತ್ಯಂತ ವಿಷಾದನೀಯ. ಉತ್ತಮ ಪರಿಸರದ ಅರಿವುಳ್ಳ ನಾಗರಿಕರೇ ಈ ದುಷ್ಕೃತ್ಯವೆಸಗಿದರೆ ಇನ್ನಾರಿಗೆ ದೂರಬೇಕು?

ಮಕ್ಕಳಂತೆ ಗಿಡಗಳನ್ನು ಅತ್ಯಂತ ಜತನದಿಂದ ಕಾಪಾಡಬೇಕು. ಮರ ಕಡಿಯುವುದನ್ನು ಖಂಡಿಸಬೇಕು. ಶಿಶು ಹತ್ಯೆ ಮಹಾಪಾಪ ಎಂಬುದು ಎಷ್ಟು ಸತ್ಯವೋ, ಸಸಿ ಹತ್ಯೆಯೂ ಅಷ್ಟೇ ಪಾಪ. ಶಿಶು ಹತ್ಯೆಯನ್ನು ಸರ್ವರೂ ಖಂಡಿಸುವಂತೆ, ಸಸಿ ಹತ್ಯೆಯನ್ನು ಏಕೆ ಖಂಡಿಸುವುದಿಲ್ಲ? ನಮ್ಮ ಮಕ್ಕಳು ಎಷ್ಟೇ ಕಷ್ಟ ಕೊಟ್ಟರು ಅದನ್ನು ಸಹಿಸಿಕೊಂಡು ಪ್ರೀತಿಯಿಂದ ಬೆಳೆಸುತ್ತೇವೆ. ಆದರೆ ನಮ್ಮಿಂದ ಯಾವುದೇ ಪ್ರತಿಫಲಾಪೇಕ್ಷೆ ಪಡೆಯದೆ ಜೀವಾಮೃತವಾದ ಆಕ್ಸಿಜನ್ ಕೊಡುವ ಮರಗಳನ್ನು ಕಡಿಯದಿರಲು ಮನವಿ.

**- ಪರಿಸರ ಜಾಗೃತಿ ಸಮುದಾಯದ ಪರವಾಗಿ ವಸಂತ್, ಡಾ. ಶಶಿಧರ್ ತವಣೆ, ಡಾ.ಬಿ.ಎಂ.ವಿಶ್ವನಾಥ್, ಸಿ.ಜಿ.ದಿನೇಶ್, ಕೊಟ್ರೇಶ್ವರ್, ಶಿವನಕೆರೆ ಬಸವಲಿಂಗಪ್ಪ, ಭರಮಪ್ಪ.**

## ನಗರದಲ್ಲಿ ಇಂದು ನಟ ಶಿವರಾಜ್‌ಕುಮಾರ್ ಹುಟ್ಟು ಹಬ್ಬ



ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿ ಸಂಘಗಳ ಒಕ್ಕೂಟ, ಡಾ. ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘ, ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾ ಘಟಕದ ಆಶ್ರಯದಲ್ಲಿ ಇಂದು ಬೆಳಿಗ್ಗೆ 9.30 ಗಂಟೆಗೆ ಶಿವರಾಜ್‌ಕುಮಾರ್ ಹುಟ್ಟು ಹಬ್ಬದ ಪ್ರಯುಕ್ತ ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಅರ್ಚನೆ ಮತ್ತು ವಿಶೇಷ ಪೂಜೆ ಹಾಗೂ 11.30 ಕ್ಕೆ ನಗರದ 35ನೇ ವಾರ್ಡಿನ ಶ್ರೀ ಮಣಿಕಂಠ ಸರ್ಕಲ್‌ನಲ್ಲಿ ಶ್ರೀಮತಿ ಸವಿತಾ, ಹುಲ್ಲುಮನೆ ಗಣೇಶ್ ಅವರ ಸಮ್ಮುಖದಲ್ಲಿ ಕೇಕ್ ಕತ್ತರಿಸುವ ಮೂಲಕ ಹುಟ್ಟು ಹಬ್ಬವನ್ನು ಆಚರಿಸಲಾಗುವುದು ಎಂದು ಜಿಲ್ಲಾಧ್ಯಕ್ಷ ಯೋಗೇಶ್ ತಿಳಿಸಿದ್ದಾರೆ.

## ನೇರ ಆಯ್ಕೆಗೆ ನಾಳೆ ಸಂದರ್ಶನ

ದಾವಣಗೆರೆ, ಜು. 11 - ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, 'ಮಾದರಿ ವೃತ್ತಿ ಕೇಂದ್ರ' ಇವರ ವತಿಯಿಂದ ನಾಡಿದ್ದು ದಿನಾಂಕ 13 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ನೇರ ಆಯ್ಕೆ ಸಂದರ್ಶನವನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಠಡಿ ಸಂಖ್ಯೆ 51, ಜಿಲ್ಲಾಧಿಕಾರಿಗಳ ಕಚೇರಿ ದಾವಣಗೆರೆ ಇಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ರವೀಂದ್ರ ಡಿ. ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08192-259446, 63615 50016.

## ಹಳೇಬಿಸಲೇರಿ ಬಿ.ಕೆ. ಈರಣ್ಣ ನಿಧನಕ್ಕೆ ಎಸ್ಸೆಸ್ ಶೋಕ

ದಾವಣಗೆರೆ,ಜು.11- ಎಪಿಎಂಸಿ ಮಾಜಿ ಅಧ್ಯಕ್ಷ ಹಳೇಬಿಸಲೇರಿ ಬಿ.ಕೆ. ಈರಣ್ಣ ಅವರ ನಿಧನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಶೋಕ ವ್ಯಕ್ತಪಡಿಸಿದ್ದಾರೆ.

ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಎಸ್.ಎಸ್. ಬಕ್ಕೇಶ್, ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಅವರುಗಳು ಈರಣ್ಣ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

## ನಗರದಲ್ಲಿ ಇಂದು ಕೀಲು-ಮೂಳೆ ಸವೆತ ತಪಾಸಣಾ ಶಿಬಿರ

ಡಾ|| ಡಿ.ಎಸ್. ಸತ್ಯೇಂದ್ರರಾವ್ ಲೆಗಸಿ ಅಂಡ್ ರಿಸರ್ಚ್ ಫೌಂಡೇಶನ್ ವತಿಯಿಂದ ಕೀಲು-ಮೂಳೆ ಸವೆತದ ತಪಾಸಣೆ ಮತ್ತು ಚಿಕಿತ್ಸಾ ಹಾಗೂ ಎಲ್ಲಾ ತರಹದ ನೋವುಗಳ ನಿರ್ಮೂಲನೆಗೆ - ಮಿರಾಕಲ್ ಥೆರಪಿ ಶಿಬಿರವು ಇಂದು ಅಕ್ಷರಧಾಮ ನಿಲಯದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ನಡೆಯಲಿದೆ.

20 ವರ್ಷ ಮೇಲ್ಪಟ್ಟವರು, ಹೆಣ್ಣುಮಕ್ಕಳು, ಮೈ-ಕೈನೋವಿರುವವರು, ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ ಸಾರ್ವಜನಿಕರು ಹಾಗೂ ಆರೋಗ್ಯಾಸಕ್ತರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ವಿವರಕ್ಕೆ ಸಂಪರ್ಕಿಸಿ : 91640 63608, 98441 24418

**ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರು (ಹಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ**

ಸಿ.ಆರ್.ಮಿಸ್ ನಂ : 75/2023

**ಅರ್ಜಿದಾರರು** : 1) **ಶ್ರೀ ಮಹಾಂತೇಶ ಭಾನುವಳ್ಳಿ**, ಬಿನ್ ಲೇಟ್ **ಹನುಮಂತಪ್ಪ**, ವಯಸ್ಸು 40 ವರ್ಷ, ವಾಸ : ದೇವರಬೆಳಕೆರೆ ರಸ್ತೆ, ಶ್ಯಾಮನೂರು, ದಾವಣಗೆರೆ. 2) **ಶ್ರೀಮತಿ ಭಾನುವಳ್ಳಿ ಬಸಮ್ಮ** ಕೋಂ ಲೇಟ್ **ಹನುಮಂತಪ್ಪ**, ವಯಸ್ಸು 68 ವರ್ಷ, 3) **ಶ್ರೀಮತಿ ಗಂಗಮ್ಮ ಕೋಂ ನಿಂಗಪ್ಪ** ಬಿನ್ ಲೇಟ್ **ಹನುಮಂತಪ್ಪ** ವಯಸ್ಸು 50 ವರ್ಷ, 4) **ಶ್ರೀಮತಿ ಅಕ್ಕಮ್ಮ** ಬಿನ್ ಲೇಟ್ **ಹನುಮಂತಪ್ಪ**, ವಯಸ್ಸು 44 ವರ್ಷ, ವಾಸ : ಮಿಟ್ಲಕಟ್ಟೆ ರಸ್ತೆ, ಸಾಲಕಟ್ಟೆ ಗ್ರಾಮ, ಹರಿಹರ ತಾಲ್ಲೂಕು, 5) **ಶ್ರೀ ತಿಪ್ಪೇಶ್** ಬಿನ್ ಲೇಟ್ **ಹನುಮಂತಪ್ಪ**, ವಯಸ್ಸು 48 ವರ್ಷ, 2, 3 ಮತ್ತು 5ನೇ ಅರ್ಜಿದಾರರ ವಾಸ : ರಾಚಪ್ಪನ ಬೀಳು, ಶ್ಯಾಮನೂರು ದಾವಣಗೆರೆ. ***ವಿರುದ್ಧ***

**ಎದುರುದಾರರು** : ಜನನ ಮತ್ತು ಮರಣಗಳ ಮುಖ್ಯ ರಿಜಿಸ್ಟ್ರಾರ್, ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ.

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು**

ಮೇಲ್ಕಂಡ ಪ್ರಕರಣದ ಅರ್ಜಿದಾರರು, **ಶ್ರೀ ಹನುಮಂತಪ್ಪ** ಬಿನ್ **ಚಟ್ನಿ ಬಸಪ್ಪ** ಇವರು ದಿನಾಂಕ 27.3.2017ರಂದು ಮರಣ ಹೊಂದಿದ್ದು, ಮೃತರ ಹೆಸರಿಗೆ ಇರುವ ಸೈಟ್ / ಮನೆ ನಂ. 59, ಅಳತೆ 23x22 ಅಡಿ ಸೊತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸೈಟ್ ನಂ. 60, ದಕ್ಷಿಣಕ್ಕೆ : ಸೈಟ್ ನಂ. 58 ಈ ಮಧ್ಯದ ಆಶ್ರಯ ಮನೆಯ ಖಾತೆಯನ್ನು ವರ್ಗಾಯಿಸಲು ಅವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಘನ ಸನ್ನಿಧಾನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ 19.8.2023ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿಯಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 7.7.2023ರಂದು ಕೊಡಲ್ಪಟ್ಟಿದೆ.

**ಡಿ.ಬಿ. ಆಂಜನೇಯ**
ಅರ್ಜಿದಾರರ ಪರ ವಕೀಲರು,
ಸ್ಥಳ : ದಾವಣಗೆರೆ

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು,**
1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.


**ಬೇಕಾಗಿದ್ದಾರೆ**

**ಶ್ರೀ ಮರುಳಸಿದ್ದೇಶ್ವರ ರೈಸ್‌ಮಿಲ್ ಬಾಡ**

ರೈಸ್‌ಮಿಲ್‌ನಲ್ಲಿ ಅಕೌಂಟೆಂಟ್ ಕೆಲಸ ಮಾಡಲು
ಬಿ.ಕಾಂ. ಪದವೀಧರರು ಬೇಕಾಗಿದ್ದಾರೆ. ಸಂಪೂರ್ಣ ಕಂಪ್ಯೂಟರ್
ಜ್ಞಾನವಿರುವ ಮತ್ತು **Tally** ಅನುಭವವಿರುವವರಿಗೆ ಮೊದಲ ಆದ್ಯತೆ.
**ಊಟ, ವಸತಿ ಉಚಿತವಿರುತ್ತದೆ.**

**ಫೋ. : 95919 72869, 99722 22663**


**ಮಹಾನಗರ ಪಾಲಿಕೆ ಕಾರ್ಯಾಲಯ**
**ದಾವಣಗೆರೆ-577 002.**

ನಂ. ದಾಮನಪಾ/ವಕ-2/ವಾ-33/ಸಿಆರ್/ /2023-24 ದಿನಾಂಕ: 30/06/2023

**ಸಾರ್ವಜನಿಕ ಪ್ರಕಟಣೆ**

ದಿನಾಂಕ: 14.02.2023 ರಂದು ಶ್ರೀ ಹೆಚ್.ಎಸ್.ವಿದ್ಯಾಧರ ಬಿನ್, ಎಸ್.ವಿ.ಉದಗಟ್ಟಿ ಶೇಖರಯ್ಯ ರವರು ಕ್ರಯಪತ್ರ ಸಂ:5545 ದಿನಾಂಕ:27.01.1983ರ ಆಧಾರದ ಮೇಲೆ ದಾವಣಗೆರೆ ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.34 ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಬರುವ ಡೋರ್ ನಂ.723/27 ಅಳತೆ 30x59 ಅಡಿ ಸ್ವತ್ತಿನ ಆಸ್ತಿ ತೆರಿಗೆ ಪಾವತಿ ಹೊಣೆಗಾರಿಕೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಿ ಕೊಡಲು, ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಕಛೇರಿ ದಾಖಲೆಯನ್ನು ಪರಿಶೀಲಿಸಲಾಗಿ ಸದರಿ ಸ್ವತ್ತಿನ ಮಾಲೀಕರ ಹೆಸರು ಕಛೇರಿ ದಾಖಲೆಯಲ್ಲಿ ಶ್ರೀಮತಿ ಸಾವಮ್ಮ ಕೋಂ ಲೋಹಿತಪ್ಪ ಎಂದು ದಾಖಲಾಗಿರುವುದು ಕಂಡುಬಂದಿರುತ್ತದೆ.

ಅರ್ಜಿದಾರರು ಹಾಜರುಪಡಿಸಿರುವ ಕ್ರಯಪತ್ರದಲ್ಲಿ #723/27ರ ಸ್ವತ್ತನ್ನು ಶ್ರೀ ಹೆಚ್.ಎಸ್. ವಿದ್ಯಾಧರ ಬಿನ್ ಎಸ್.ವಿ.ಉದಗಟ್ಟಿ ಶೇಖರಯ್ಯ ರವರು ಮೂಲ ಬಡಾವಣೆಯ ಮಾಲೀಕರಾದ ಶ್ರೀ ಎಂ.ವೀರಭದ್ರಪ್ಪ, ಎಂ.ಬಸವರಾಜಪ್ಪ, ಕೆ.ಸಿ.ಬಾದಾಮಿ, ಎ.ಶಿವಾನಂದ, ಹೆಚ್.ವಿಶ್ವನಾಥಪ್ಪ, ಪಿ. ಜೆ.ರಂಗನಾಥ, ಟಿ.ಎನ್. ಪ್ರಸನ್ನಕುಮಾರ್ ರವರುಗಳಿಂದ ಕ್ರಯಕ್ಕೆ ಪಡೆದಿರುವುದು ಕಂಡು ಬಂದಿರುತ್ತದೆ. 2000-01ನೇ ಸಾಲಿನ ಎಂ.ಎ.ಆರ್-19 ಪುಸ್ತಕದಲ್ಲಿ ಹಾಲಿ ಕಛೇರಿ ದಾಖಲೆಯಲ್ಲಿ ಮೂಲ ಮಾಲೀಕರ ಹೆಸರನ್ನು ತಿರುಚಿ ಶ್ರೀಮತಿ ಸಾವಮ್ಮ ಕೋಂ ಲೋಹಿತಪ್ಪ ಇವರ ಹೆಸರನ್ನು ನಮೂದಿಸಿರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ಖಾಲಿ ನಿವೇಶನವಿರುವುದು ಕಂಡುಬಂದಿರುವುದರಿಂದ ಈ ಸಾರ್ವಜನಿಕ ಪ್ರಕಟಣೆ ಮೂಲಕ ಶ್ರೀಮತಿ ಸಾವಮ್ಮ ಕೋಂ ಲೋಹಿತಪ್ಪ ಆಗಲೀ ಅಥವಾ ಡೋರ್ ನಂ:123/27ರ ಸ್ವತ್ತಿಗೆ ಸಂಬಂಧಪಟ್ಟ ವಾರಸುದಾರರಿಗೆ ತಿಳಿಸುವುದೇನೆಂದರೆ, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಮಾಲೀಕತ್ವದ ಮೂಲ ದಾಖಲೆಗಳನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಚುರಪಡಿಸಿದ 15 ದಿನಗಳೊಳಗಾಗಿ ಈ ಕಛೇರಿಯ ಕಂದಾಯ ಶಾಖೆಗೆ ಹಾಜರುಪಡಿಸಲು ತಿಳಿಸಿದೆ. ತಪ್ಪಿದಲ್ಲಿ ಬೇರೆ ಮಾಲೀಕರು ಯಾರೂ ಇಲ್ಲ ಎಂದು ಭಾವಿಸಿ, ಡೋರ್ ನಂ.723/27 ರ ಆಸ್ತಿ ತೆರಿಗೆ ದಾಖಲಾತಿ ಹೊಣೆಯನ್ನು ಶ್ರೀ ಹೆಚ್.ಎಸ್.ವಿದ್ಯಾಧರ ಬಿನ್ ಎಸ್.ವಿ.ಉದಗಟ್ಟಿ ಶೇಖರಯ್ಯ ರವರ ಹೆಸರಿಗೆ ನಮೂದಿಸಿಕೊಳ್ಳಲಾಗುವುದು ಎಂದು ತಿಳಿಯಪಡಿಸಿದೆ.

**ಸಹಿ /- ಉಪ ಆಯುಕ್ತರು (ಕಂದಾಯ)**
**ಮಹಾನಗರಪಾಲಿಕೆ, ದಾವಣಗೆರೆ**

## ಒಬಿಸಿ ಸೇರ್ಪಡೆ : ವೀರಶೈವ-ಲಿಂಗಾಯತ ಜನಪ್ರತಿನಿಧಿಗಳ ಸಭೆ



ಬೆಂಗಳೂರು, ಜು. 11 - ವೀರಶೈವ ಲಿಂಗಾಯತ ಮಠಾಧೀಶರ ವೇದಿಕೆ ವತಿಯಿಂದ ಸಮಗ್ರ ವೀರಶೈವ ಲಿಂಗಾಯತ ಸಮುದಾಯವನ್ನು ಕೇಂದ್ರದ ಒ.ಬಿ.ಸಿ ಪಟ್ಟಿಗೆ ಸೇರಿಸುವ ಕುರಿತು ವೀರಶೈವ ಲಿಂಗಾಯತ ಸಮಾಜದ ಜನಪ್ರತಿನಿಧಿಗಳ ಸಮಾಲೋಚನಾ ಸಭೆಯು, ಶ್ರೀಮದ್ ಉಜ್ಜಯಿನಿ ಹಾಗು ಶ್ರೀಶೈಲ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ಹರ ಗುರು ಚರ ಮೂರ್ತಿಗಳ ನೇತೃತ್ವದಲ್ಲಿ ಇಂದಿಲ್ಲಿ ನೆರವೇರಿತು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಶಾಸಕ ಬಿ.ವೈ.ವಿಜಯೇಂದ್ರ, ಶಾಸಕ ಡಿ.ಜಿ ಶಾಂತನಗೌಡ, ಭರತ್ ರೆಡ್ಡಿ, ಬಿ.ಆರ್. ಪಾಟೀಲ್, ಹನುಮಂತ ನಿರಾಣಿ, ಅರವಿಂದ್ ಬೆಲ್ಲದ್, ಶೈಲೇಂದ್ರ ಬೆಲ್ದಾಳೆ, ಯು.ಬಿ.ಬಣಕಾರ್, ಶ್ರೀಮತಿ ಲತಾ ಮಲ್ಲಿಕಾರ್ಜುನ್, ಜಿ.ಎಸ್. ಪಾಟೀಲ್, ಮೋಹನ್ ಲಿಂಬಿಕಾಯಿ, ಶರಣು ಕುಂದಕನೂರು, ಸಮಾಜದ ಮುಖಂಡರಾದ ಬಿ. ಎಸ್. ಪರಮಶಿವಯ್ಯ, ಗುರುಸ್ವಾಮಿ, ಗುರುಮಠ್, ನಟರಾಜ್, ಆರ್.ಟಿ.ಪ್ರಶಾಂತ್, ಚಿದಾನಂದ್ ಮಠದ್, ರೇಣುಕಾ ಪ್ರಸಾದ್ ಸೇರಿದಂತೆ, ಸಮಾಜದ ಅನೇಕ ಬಾಂಧವರು ಉಪಸ್ಥಿತರಿದ್ದರು.



**ಜಗದ್ಗುರುಗಳ ಮತ್ತು ಎಸ್ಸೆಸ್ ನೇತೃತ್ವದಲ್ಲಿ ಚರ್ಚೆ**

## ಹತ್ಯೆ ಪ್ರಕರಣ ಸಿಓಡಿ ತನಿಖೆಗೆ ವಹಿಸಲು ನಾಗರಾಜ್ ಆಗ್ರಹ



ದಾವಣಗೆರೆ, ಜು.11- ಮೈಸೂರು ಜಿಲ್ಲೆ ಟಿ.ನರಸಿಪುರದಲ್ಲಿ ಸಂಭವಿಸಿರುವ ನಾಯಕ ಜನಾಂಗದ ಯುವಕ ವೇಣುಗೋಪಾಲನ ಹತ್ಯೆ ಪ್ರಕರಣವನ್ನು ಸಿಓಡಿ ತನಿಖೆಗೆ ಒಪ್ಪಿಸುವಂತೆ ನಾಯಕ ಸಮಾಜ ಮತ್ತು ಜೆಡಿಎಸ್ ಮುಖಂಡ ಎಂ.ಎನ್.ನಾಗರಾಜ್ ಒತ್ತಾಯಿಸಿದ್ದಾರೆ.

ಹತ್ಯೆ ಮಾಡಿದವರನ್ನು ಕೂಡಲೇ ಬಂಧಿಸಬೇಕು, ಮೃತನ ಪತ್ನಿಗೆ ಸರ್ಕಾರಿ ನೌಕರಿ ಮತ್ತು 25 ಲಕ್ಷ ರೂ. ಪರಿಹಾರ ನೀಡಬೇಕು. ಈ ಹತ್ಯೆಯನ್ನು ರಾಜಕೀಯಕ್ಕೆ ಬಳಸಬಾರದು. ರಾಜ್ಯ ಮತ್ತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವು ಪರಿಹಾರ ಮತ್ತು ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ನಾಗರಾಜ್ ಆಗ್ರಹಿಸಿದ್ದಾರೆ.

## ಕುರಿ ಮೇಲೆ ಹರಿದ ವಂದೇ ಭಾರತ್ ರೈಲು



**ಕಲ್ಲು ತೂರಾಟ**

ಅಯೋಧ್ಯೆ, ಜು. 11 – ವಂದೇ ಭಾರತ್ ರೈಲು ಕುರಿಗಳ ಮೇಲೆ ಹರಿದಿದೆ ಎಂದು ಆಕ್ರೋಶಗೊಂಡ ಕೆಲವರು, ರೈಲಿನ ಮೇಲೆ ಕಲ್ಲು ತೂರಿದ ಘಟನೆ ನಡೆದಿದೆ. ಈ ಸಂಬಂಧ ಮೂವರನ್ನು ಬಂಧಿಸಲಾಗಿದೆ.

ಉತ್ತರ ಪ್ರದೇಶದ ಸೊಹವಲ್ ಎಂಬಲ್ಲಿ ರೈಲು ಹೋಗುವಾಗ ಕಲ್ಲು ತೂರಲಾಗಿದೆ. ಇದರಿಂದಾಗಿ ಎರಡು ಬೋಗಿಗಳ ಕಿಟಕಿ ಗಾಜುಗಳು ಒಡೆದಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಜುಲೈ 7ರಿಂದ ಗೋರಖ್‌ಪುರ ಹಾಗೂ ಲಖ್ನೌ ನಡುವಿನ ವಂದೇ ಭಾರತ್ ರೈಲು ಆರಂಭವಾಗಿತ್ತು. ಈ ರೈಲು ಅಯೋಧ್ಯೆ ಹಾದು ಹೋಗುತ್ತದೆ. ಕಲ್ಲು ತೂರಾಟದ ನಂತರವೂ ರೈಲು ಲಖ್ನೌವರೆಗಿನ ಪ್ರಯಾಣ ಪೂರ್ಣಗೊಳಿಸಿದೆ.

ನನ್ನು ಪಾಸ್ವಾನ್ ಎಂಬುವವರಿಗೆ ಸೇರಿದ ಕುರಿಗಳು ಸತ್ತಿದ್ದವು. ನಂತರದಲ್ಲಿ ಪಾಸ್ವಾನ್ ಹಾಗೂ ಸಹಚರರು ಸೇರಿಕೊಂಡು ರೈಲಿನ ಮೇಲೆ ಕಲ್ಲು ತೂರಿದ್ದಾರೆ.

ಈ ಬಗ್ಗೆ ಪಾಸ್ವಾನ್ ಹಾಗೂ ಮಕ್ಕಳಾದ ಅಜಯ್ ಮತ್ತು ವಿಜಯ್ ಎಂಬುವವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

## 370ನೇ ವಿಧಿ ರದ್ದು : ಆ.2ರಿಂದ ಸುಪ್ರೀಂ ಕೋರ್ಟ್‌ನಲ್ಲಿ ಪ್ರತಿನಿತ್ಯ ವಿಚಾರಣೆ

ನವದೆಹಲಿ, ಜು. 11 – ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿ ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ದಾಖಲಾಗಿರುವ ಅರ್ಜಿಗಳನ್ನು ಆಗಸ್ಟ್ 2ರಿಂದ ಪ್ರತಿದಿನ ವಿಚಾರಣೆಗೆ ಒಳಪಡಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಈ ಬಗ್ಗೆ ವಿಚಾರಣೆ ನಡೆಸಲಿದೆ. ಬೇರೆ ಬೇರೆ ಕಕ್ಷಿದಾರರು ಈ ಕುರಿತು ಜುಲೈ 27ರ ಒಳಗೆ ಅರ್ಜಿ ಸಲ್ಲಿಸುವಂತೆ ನ್ಯಾಯಾಲಯ ತಿಳಿಸಿದೆ.

## ಅಂಬಾಭವಾನಿ ಬ್ಯಾಂಕ್‌ಗೆ 15 ಜನರೂ ಅವಿರೋಧ ಆಯ್ಕೆ



ದಾವಣಗೆರೆ, ಜು. 11- ಸ್ಥಳೀಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ಶ್ರೀ ಅಂಬಾಭವಾನಿ ಅರ್ಬನ್ ಕೋ - ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ಎಲ್ಲಾ ಹದಿನೈದು ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆದಿದೆ.

ಮುಂದಿನ 5 ವರ್ಷಗಳ ಅವಧಿಗೆ ಇದೇ ದಿನಾಂಕ 16ರಂದು ನಡೆಯಬೇಕಿದ್ದ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದ ಇಂದು 15 ಜನ ಮಾತ್ರ ಉಮೇದುವಾರಿಕೆ ಅರ್ಜಿ ಸಲ್ಲಿಸಿದ್ದ ಕಾರಣ, ಅವರೆಲ್ಲರೂ ಅವಿರೋಧ ಆಯ್ಕೆಗೆ ಸಹಕಾರಿಯಾಯಿತು.

ಆರ್.ಜಿ. ಸತ್ಯನಾರಾಯಣ, ಬಾಬುರಾವ್ ಎಸ್. ಸಾಳಂಕಿ, ಗೋಪಾಲ್‌ರಾವ್ ಮಾನೆ, ಎಂ.ಡಿ. ಗಿರಿಧರ್, ಆನಂದ್ ಡಿ. ಸಫಾರೆ, ಕೆ. ಗಣೇಶ್, ಎಸ್.ಕೆ. ಮಧುಕರ್, ಆರ್. ವಿಠಲ್, ವಿ. ಮನೋಹರ್, ವೈದ್ಯರಾದ ಡಾ. ಎಸ್. ರಜನಿ, ಬಾಬು, ಶ್ರೀಮತಿ ಅನಿತಾಬಾಯಿ ಮಾಲತೇಶರಾವ್ ಜಾಧವ್, ಶ್ರೀಮತಿ ರೇಣುಕಾಬಾಯಿ, ರಾಜು ಎಲ್. ಬದ್ದಿ ಮತ್ತು ಜಿ. ಯಲ್ಲಪ್ಪ ಅವರುಗಳು ಚುನಾಯಿತರಾಗಿದ್ದಾರೆ.

ಸಹಕಾರ ಸಂಘಗಳ ದಾವಣಗೆರೆ ಉಪವಿಭಾಗದ ಸಹಾಯಕ ನಿಬಂಧಕರ ಕಛೇರಿಯ ಹಿರಿಯ ನಿರೀಕ್ಷಕ ಎಲ್. ಸತೀಶ್‌ನಾಯ್ಕ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಬ್ಯಾಂಕಿನ ವ್ಯವಸ್ಥಾಪಕ ನಾಗರಾಜ್ ಗೌಡನಕಟ್ಟಿ ಮತ್ತು ಸಹಾಯಕ ವ್ಯವಸ್ಥಾಪಕ ಅನಿಲ್ ಟಿ. ಮಾಳದಕರ್ ಮತ್ತು ಸಿಬ್ಬಂದಿ ವರ್ಗದವರು ಚುನಾವಣಾ ಪ್ರಕ್ರಿಯೆಗೆ ಸಹಕರಿಸಿದರು.

ಬ್ಯಾಂಕಿನ ಆಡಳಿತ ಮಂಡಳಿಗೆ ಎಲ್ಲಾ ಹದಿನೈದು ಜನರು ಅವಿರೋಧವಾಗಿ ಆಯ್ಕೆಯಾಗಿರುವ ಕಾರಣ, ಇದೇ ದಿನಾಂಕ 16ರಂದು ನಡೆಯಬೇಕಿದ್ದ ಚುನಾವಣೆ ಇರುವುದಿಲ್ಲ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

## ಜೈನ ಮುನಿ ಹತ್ಯೆಯ ಸಿಬಿಐ ತನಿಖೆ ಇಲ್ಲ : ಸಿಎಂ ಸ್ಪಷ್ಟನೆ

ಬೆಂಗಳೂರು, ಜು. 11 - ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ಜೈನಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಪ್ರಕರಣವನ್ನು ಪೊಲೀಸರ ಕೈಯ್ಯಲ್ಲೇ ಗಂಭೀರವಾಗಿ ತನಿಖೆ ಮಾಡಿಸುತ್ತೇವೆ. ಇದನ್ನು ಸಿ.ಬಿ.ಐ.ಗೆ ವಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷಗಳು, ಸಿ.ಬಿ.ಐ. ತನಿಖೆಗೆ ಆಗ್ರಹಿಸಿದ್ದವು. ಗದ್ದಲದ ಕಾರಣದಿಂದ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಕಲಾಪವನ್ನು ಕೆಲ ನಿಮಿಷ ಹಾಗೂ ನಂತರ ಇಡೀ ದಿನ ಮುಂದೂಡಿದರು.

ಬಿಜೆಪಿಯ ಬೇಡಿಕೆ ತಳ್ಳಿ ಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ. ಪರಮೇಶ್ವರ್, ಪೊಲೀಸರು ದಕ್ಷವಾಗಿ ತನಿಖೆ ನಡೆಸುತ್ತಿದ್ದಾರೆ ಹಾಗೂ ಸತ್ಯ ಹೊರ ಬರಲಿದೆ. ದೋಷಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

## ಮದ್ಯ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

ಮಂಗಳೂರು, ಜು. 11 – ರಾಜ್ಯ ಸರ್ಕಾರ ಮದ್ಯದ ದರ ಏರಿಸಿರುವುದರ ವಿರುದ್ಧ ಉಡುಪಿಯಲ್ಲಿ ಪ್ರತಿಭಟನೆ ನಡೆಸಲಾಗಿದೆ. ಇತ್ತೀಚಿನ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಮದ್ಯದ ಬೆಲೆ ಏರಿಕೆ ಮಾಡಿತ್ತು.

ಸಾಮಾಜಿಕ ಕಾರ್ಯಕರ್ತ ನಿತ್ಯಾನಂದ ವೊಲಕಡು ನೇತೃತ್ವದಲ್ಲಿ ಮದ್ಯಪ್ರೇಮಿಗಳು ಪ್ರತಿಭಟನೆ ನಡೆಸಿದ್ದಾರೆ.

ವಿದ್ಯುತ್ ದರ ಇಲ್ಲವೇ ಅಡುಗೆ ಅನಿಲ ದರ ಏರಿಸಿದಾಗ ಜನರು ಪ್ರತಿಭಟನೆ ನಡೆಸುತ್ತಾರೆ. ಆದರೆ, ಮದ್ಯದ ದರ ಏರಿಸಿದಾಗ ಯಾರೂ ಪ್ರತಿಭಟಿಸುವುದಿಲ್ಲ. ಹೀಗಾಗಿ ಪ್ರತಿಭಟನೆ ಆಯೋಜಿಸಿರುವುದಾಗಿ ನಿತ್ಯಾನಂದ ಹೇಳಿದ್ದಾರೆ.

## ಗಣೇಶ ಉತ್ಸವ : ಹರಿಹರದಲ್ಲಿ ಇಂದು ಸಭೆ

ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಇಲ್ಲಿನ ಗಾಂಧಿ ಮೈದಾನದ ಶ್ರೀ ಸಾರ್ವಜನಿಕ ವಿನಾಯಕ ಸಂಘದಿಂದ ಗಣೇಶೋತ್ಸವ ಆಚರಿಸಲು ಇಂದು ಸಂಜೆ 3.30ಕ್ಕೆ ರಚನಾ ಕ್ರೀಡಾ ಕ್ಲಬ್‌ನಲ್ಲಿ ಸಭೆ ಕರೆಯಲಾಗಿದೆ.

